ಕರ್ಣಾಟಕ ಕಾವ್ಯಕಲಾನಿಧಿ, ಕೋಶಸಂಖ್ಯೆ—೪೧

# ನರಹರಿಯ

# ವೈರಾವಣನ ಕಾಳಗ

(ಭಾಮಿನಿಷಟ್ಪದಿ)

ಮಂ. ಆ. ರಾಮಾನುಜಯ್ಯಂಗಾರ್ಯ
ಅಸಿಸ್ಟೆಂಟ್ ಮಾಸ್ಟರ್, ಮಹಾರಾಣೀ ಕಾಲೇಜ್, ಮೈಸೂರು—
ಇವರಿಂದ ಪರಿಶೋಧಿತವಾಗಿ

ಮೈಸೂರು
ಶ್ರೀನಿವಾಸ ಮುದ್ರಣಶಾಲೆಯಲ್ಲಿ ಮುದ್ರಿತವಾಯಿತು.

1912

ಕ್ರಯ ೮ ಆಣೆ]

UNIVERSAL LIBRARY
OU_200636
UNIVERSAL LIBRARY

PRINTED BY

S. NANJUNDA SASTRI

AT THE SREENIVASA PRESS, MYSORE

# ಪೀ ಠಿ ಕೆ

ಈ ಗ್ರಂಥವನ್ನು ಬರೆದವನು ನರಹರಿಯೆಂದೂ ಈತನ ಗುರುವು ವಿದ್ಯಾ ಶಂಕರೋತ್ತಮನೆಂದೂ ಪೀಠಿಕಾಸಂಧಿಯಿಂದ ತಿಳಿಯಬರುತ್ತದೆ. ಕವಿಯು ತಾನು "ಬುಧವಂಶಜನು" ಎಂದು ಹೇಳಿಕೊಂಡಿರುವುದರಿಂದ ಬ್ರಾಹ್ಮಣನಾಗಿಯೂ, ತನ್ನ ಗುರುವಿಗೆ 'ಪರಮಹಂಸ' ಎಂಬ ವಿಶೇಷಣವನ್ನು ಕೊಟ್ಟಿರುವುದರಿಂದ ಆ ಗುರುವು ಸನ್ಯಾಸಿಯಾಗಿಯೂ, 'ತೊರವೆಯ ಹರಿ' 'ತೊರವೆಯ ರಾಯ ರಘು ನಾಥ' ಎಂಬುದಾಗಿ ರಾಮಚಂದ್ರನಿಗೆ ವಿಶೇಷಿಸಿ ಹೇಳಿರುವುದರಿಂದ ಈತನು ಹುಟ್ಟಿದ ಸ್ಥಳವು ಷೋಲಾಪುರ ಡಿಸ್ಟ್ರಿಕ್ಟಿನಲ್ಲಿರುವ ತೊರವೆಯೆಂಬ ಗ್ರಾಮವಾಗಿಯೂ, ಆವೂರಿನ ದೇವರು ಅವನ ಇಷ್ಟದೈವವಾಗಿಯೂ ಇರಬೇಕು. ಇಷ್ಟೇ ಈಗ್ರಂಥದಿಂದ ಕವಿಯ ವಿಷಯವಾಗಿ ತಿಳಿಯಬರುವುದು.

ತೊರವೆಯ ರಾಮಾಯಣವನ್ನು ಬರೆದ ಕುಮಾರವಾಲ್ಮೀಕಿಯೇ ಈ ಮೈರಾವಣನ ಕಾಳಗವನ್ನೂ ಬರೆದನು ಎಂದು ಪ್ರವಾದವಿದೆ. ಈಪ್ರವಾದವು ಆಧಾರವಿಲ್ಲದೆ ಹುಟ್ಟಿರಲಾರದೆಂದು ಹೇಳಬಹುದು. ತೊರವೆಯ ರಾಮಾಯಣದಲ್ಲಿ ಮೊದಲು ತ್ರಿಮೂರ್ತಿಗಳನ್ನು ಸ್ತುತಿಸಿರುವಂತೆ ಈಗ್ರಂಥದಲ್ಲಿಯೂ ತ್ರಿಮೂರ್ತಿಗಳನ್ನು ಸ್ತುತಿಸಿರುವನು. ತೊರವೆಯ ರಾಮಾಯಣದಲ್ಲಿ ರಾಮನಾಮಕ್ಕೆ ಪ್ರತಿಯಾಗಿ ತನ್ನ ಇಷ್ಟದೈವವಾದ ತೊರವೆಯಧಿನಾಥನ ಹೆಸರನ್ನು ಹೇಳಿರುವಂತೆ ಈ ಗ್ರಂಥದಲ್ಲಿಯೂ ಹೇಳಿರುವನು. ಎರಡು ಗ್ರಂಥಗಳ ಶೈಲಿಯೂ ಒಂದೇಮಾದರಿಯಾಗಿದೆ. ಕುಮಾರವಾಲ್ಮೀಕಿಯೆಂಬುದು ಬಿರುದೇ ಹೊರತು ಈತನ ಹೆಸರಲ್ಲ. ಈ ಗ್ರಂಥದ ಪೀಠಿಕಾಸಂಧಿಯಲ್ಲಿ 'ವಿರಚಿಸಿದ ಬುಧವಂಶಜನು ನರಹರಿಯೆನಿಪನಿಳೆಯೊಳಗೆ ಮೈರಾವಣನ ಕಾಳಗವ' ಎಂದು ಹೇಳಿಕೊಂಡಿದ್ದಾನೆ.

ತೊರವೆಯರಾಮಾಯಣ ಗ್ರಂಥಕರ್ತನು ಈ ನರಹರಿಯೇ ಎಂದು ಊಹಿಸುವುದಕ್ಕೆ ಬಲುಮಟ್ಟಿಗೆ ತೊರವೆಯರಾಮಾಯಣದ ಪೀಠಿಕಾಸಂಧಿಯ ಹತ್ತನೆಯ ಪದ್ಯವು ಅವಕಾಶವನ್ನು ಕೊಡುತ್ತದೆ :—

ಚಾರುತರ ಕರ್ಣಾಟಕದ ಪ |
ಸ್ತಾರ ರಾಮಾಯಣಕೆ ಕರ್ತೃ ಕು |
ಮಾರ ವಾಲ್ಮೀಕಿಯೆ ಕಥಾಪತಿ ತೊರವೆಯಧಿನಾಥ ||
ವೀರನರಹರಿಯೆನಲು ಮೆಚ್ಚಿದ |
ರಾರು | (ಸಂಧಿ. ೧-೧೦)

ಕವಿಯು ತನ್ನ ಹೆಸರೂ ತನ್ನ ಇಷ್ಟದೈವದ ಹೆಸರೂ ಒಂದೇ ಆಗಿರಲಾಗಿ ಅವನ್ನು ತಿಳಿಸುವುದಕ್ಕೋಸ್ಕರ "ತೊರವೆಯಧಿನಾಥ ವೀರನರಹರಿ" ಎಂದು ಒಟ್ಟಿಗೆ ಸೇರಿಸಿ ಹೇಳಿಕೊಂಡಿರುವಂತೆ ತೋರುತ್ತದೆ. ಹೆಸರೂ ಇಷ್ಟದೈವದ ಹೆಸರೂ ಒಂದೇಆಗಿರುವುದರಿಂದ ಕನ್ನಡಭಾರತವನ್ನು ರಚಿಸಿದ ನಾರಣಪ್ಪನು "ದುಗಿನ ವೀರ ನಾರಾಯಣ" ಎಂಬುದರಲ್ಲಿಯೂ, ಜೈಮಿನಿಭಾರತವನ್ನು ಬರೆದ ಲಕ್ಷ್ಮೀಶನು "ಸುರಪುರದ ಲಕ್ಷ್ಮೀರಮಣ" ಎಂಬುದರಲ್ಲಿಯೂ ಅವೆರಡನ್ನು ಸೂಚಿಸಿಕೊಂಡಿರುವಂತೆ, ಇವನೂ ಸೂಚಿಸಿರುತ್ತಾನೆ. ತೊರವೆಯ ರಾಮಾಯಣದಲ್ಲಿ—

ಶರಣಜನಪರಿಪಾಲನಾನತ |
ಪರಿಧಿ ನಿರುಪಮತತ್ವವಿದ್ಯಾ |
ಶರಧಿ ಸಲುಹೆಗೆ ನಮ್ಮಭಾರದ್ವಾಜ ಗುರುರಾಯ || ಎಂದೂ

ಈಗ್ರಂಥದಲ್ಲಿ—

ಪರಮಹಂಸಪರೇಶಪಾವನ |
ಚರಿತವಿದ್ಯಾಶಂಕರೋತ್ತಮ |
ಗುರುಪದಾಂಬುಜಯುಗಳಕಾಂ ನಮಿಸುವೆನು ಭಕ್ತಿಯಲಿ ||

ಎಂದೂ ಗುರುಸ್ತುತಿಯನ್ನು ಮಾಡಿದ್ದಾನೆ.

ವಿದ್ಯಾ ಶರಧಿ, ವಿದ್ಯಾಶಂಕರ ಎಂಬುವು ವಿದ್ಯೆಯಲ್ಲಿ ಪೂರ್ಣಪಾಂಡಿತ್ಯವನ್ನು ನಿರೂಪಿಸುವ ಪರ್ಯಾಯಪದಗಳಾಗಿದ್ದಲ್ಲಿ ಈಯೆರಡು ಸ್ತುತಿಗಳೂ ಒಬ್ಬ ಗುರುವಿನ ವಿಷಯವಾಗಿಯೇ ಇರಬಹುದು. ವಿದ್ಯಾಶಂಕರನೆಂದು ಒಂದುವೇಳೆ ಅವನ ಹೆಸರಾಗಿದ್ದರೂ ಇರಬಹುದು. ಭಾರದ್ವಾಜ ಗುರುರಾಯ ಎಂಬುದರಿಂದ ಭಾರದ್ವಾಜ ಗೋತ್ರದಲ್ಲಿ ಹುಟ್ಟಿದವನು ಆ ಗುರು ಎಂದು ಅರ್ಥವಾಗುತ್ತದೆ. ರಾಮಾಯಣದಲ್ಲಿ ನಿಯತವಾಗಿ ತೊರವೆಯ 'ನರಹರಿ' 'ನರಕೇಸರಿ' 'ನೃಕಂಠೀರವ' ಎಂಬ ವಿಶೇಷಣಗಳೇ ಇಷ್ಟದೈವವನ್ನು ನಿರೂಪಿಸುತ್ತದೆ, ಮೈರಾವಣನ ಕಾಳಗ

ದಲ್ಲಿ ಇಷ್ಟದೈವವನ್ನು 'ತೊರವೆಯಧಿಪತಿ' 'ತೊರವೆಯರಾಯ' ಎಂದು ವಿಶೇಷಿಸಿ ಹೇಳಿದೆ. ಈ ವ್ಯತ್ಯಾಸಗಳು ಈ ಗ್ರಂಥಕರ್ತರು ಬೇರೆಬೇರೆಯೆಂದು ಊಹಿಸುವುದಕ್ಕೆ ಸ್ವಲ್ಪದಾರಿಯನ್ನು ಕೊಡುವಹಾಗಿದ್ದರೂ ಹರಿ, ನರಹರಿ, ಎಂಬುವು ಪರ್ಯಾಯಪದಗಳಾದುದರಿಂದ ಈ ವ್ಯತ್ಯಾಸವೊಂದರಿಂದಲೇ ಅವರು ಭಿನ್ನಕರ್ತೃಗಳೆಂದು ಉಪಪಾದಿಸಲಾಗುವುದಿಲ್ಲ.

ಮೈರಾವಣನ ಚರಿತ್ರೆಯಲ್ಲಿ ತನ್ನ ಬಿರುದನ್ನು ಹೇಳಿಕೊಳ್ಳದೆ ಇರುವುದರಿಂದ ಇದು ಆತನು ರಾಮಾಯಣವನ್ನು ರಚಿಸುವುದಕ್ಕೆ ಮೊದಲು ಬರೆದ ಗ್ರಂಥವಾಗಿ ಇರಬಹುದು.

ತೊರವೆಯ ರಾಮಾಯಣವನ್ನು ಬರೆದ ಕವಿಯು ೧೬ ನೆಯ ಶತಮಾನದ ಆದಿಭಾಗದಲ್ಲಿದ್ದ ಕುಮಾರವ್ಯಾಸನನ್ನು ಸ್ಮರಿಸಿರುವುದರಿಂದ ೧೬ ನೆಯ ಶತಮಾನದ ಸುಮಾರು ಅಂತ್ಯಭಾಗದಲ್ಲಿ ಇದ್ದಿರಬಹುದು.

# ಕಥಾಗರ್ಭ

೧. ಪೀಠಿಕಾಸಂಧಿಯಲ್ಲಿ—

ಕವಿಯು ಮೊದಲು ತ್ರಿಮೂರ್ತಿಗಳಿಗೆ ಪ್ರಾರ್ಥನೆಯನ್ನು ಮಾಡಿ, ಬಳಿಕ ಗಣಪತಿ, ಶಾರದೆಯರನ್ನು ಸ್ತುತಿಸಿ, ತರುವಾಯ ತನ್ನ ಗುರುವಾದ ವಿದ್ಯಾಶಂಕರೋತ್ತಮಗುರುಗಳಿಗೆ ನಮಸ್ಕರಿಸಿ ಗ್ರಂಥಾರಂಭ ಮಾಡುವನು.

೨. ಎರಡನೆಯ ಸಂಧಿಯಲ್ಲಿ—

ಕಥಾರಂಭ—ರಾವಣನು ರಾಮನನ್ನು ಗೆಲ್ಲುವುದಕ್ಕೋಸ್ಕರ ಪಾತಾಳ ಲಂಕೆಗೆ ಹೋಗಿ ಮೈರಾವಣನ ಸಹಾಯವನ್ನು ಬೇಡುವನು.

೩. ಮೂರನೆಯ ಸಂಧಿಯಲ್ಲಿ—

ಮೈರಾವಣನು ರಾಮಲಕ್ಷ್ಮಣರನ್ನು ಅವರು ನಿದ್ರೆಮಾಡುತ್ತಿರುವಾಗ ಕದ್ದು ಪಾತಾಳಲಂಕೆಗೆ ಒಯ್ದು, ಕಂಕಣಾದೇವಿಯ ಗುಡಿಯಲ್ಲಿ ಸೆರೆಯಿಡುವನು. ಈ ಸಂಗತಿಯನ್ನು ಹನುಮಂತನು ವಿಭೀಷಣನಿಂದ ತಿಳಿದು ಪಾತಾಳಲಂಕೆಗೆ ಹೋಗುವನು.

೪. ನಾಲ್ಕನೆಯ ಸಂಧಿಯಲ್ಲಿ—

ಹನುಮಂತನು ರಣದಲ್ಲಿ ಮೈರಾವಣನನ್ನು ಕೊಂದು, ನೀಲಮೇಘನಿಗೆ ಪಟ್ಟಗಟ್ಟಿ, ರಾಮಲಕ್ಷ್ಮಣರನ್ನು ಬೆಳಗಾಗುವುದಕ್ಕೆ ಮುಂಚೆ ತಮ್ಮ ಪಾಳೆಯಕ್ಕೆ ಕರೆತರುವನು.

# ವಿಷಯಸೂಚಿ


| | | |
|---|---|---|
| | | ಪುಟಸಂಖ್ಯೆ |
| ಪೀಠಿಕಾ ಸಂಧಿ | ... | ೧—೨ |
| ಎರಡನೆಯ ಸಂಧಿ | ... | ೨—೧೨ |
| ಮೂಱನೆಯ ಸಂಧಿ | ... | ೨೧—೪೧ |
| ನಾಲ್ಕನೆಯ ಸಂಧಿ | ... | ೪೧—೬೮ |

|| ಶ್ರೀರಸ್ತು ||

# ಮೈರಾವಣನ ಕಾಳಗ

|| ಭಾಮಿನಿ ಷಟ್ಪದಿ ||

ಶ್ರೀಮದನುಪಮನಾಮ ಪುಣ್ಯ |
ಸ್ತೋಮನಗಣಿತಮಹಿಮ ಭಕ್ತ |
ಪ್ರೇಮ ಕರುಣಾಸಿಂಧು ಮಂಗಳಚರಿತ ನಿಸ್ಸೀಮ ||
ಕಾಮಪಿತ ಕಮಲಾಕ್ಷ ಸಾಸಿರ |
ನಾಮ ಸುಲಲಿತ ನೀಲಮೇಘ |
ಶ್ಯಾಮ ರಕ್ಷಿಸು ಜಗವ ಸುಮನೋರಾಮ ರಘುರಾಮ ||೧||
ಪಿಡಿದ ಡಮರುಗ ಶೂಲ ಹಣೆಯೊಳ |
ಗಡಗಿಸಿದ ಕಿಡಿ ಜಡೆಯ ಗಂಗೆಯ |
ಒಡಲ ಭಸಿತದ ಕರಪಿನಾಕದ ಕರಿಯ ಪುಲಿದೊಪಲ ||
ಉಡುಗೆ ಶಿರದ ಶಶಾಂಕ ವಾಮದ |
ತೊಡೆಯ ಗಿರಿಜಾಲಿಂಗನದ ಜಗ |
ದೊಡೆಯ ಕಡುಚೆಲ್ವಾಂತ ಮೃಡ ನೀಡೆಮಗೆ ಮಂಗಳವ ||೨||
ಹರಿಯ ನಾಭೀಕಮಲದೊಳಗವ |
ತರಿಸಿ ಶಿರ ನಾಲ್ಕಱಕೊಳು ವೇದವ |
ಧರಿಸಿ ಸಚರಾಚರದ ಸೃಷ್ಟಿಗೆ ಮೂಲನೆಂದೆನಿಸಿ ||
ಸುರನರೋರಗನಮಿತಪಾದಾಂ |
ಬುರುಹ ನಿರ್ಮಲವಸ್ತುವೆನಿಸಿದ |
ಸರಸಿರುಹಭವ ಬೊಮ್ಮ ಕರುಣಿಸು ಮತಿಗೆ ಮಂಗಳವ ||೩||
ಪಿಡಿದು ಪಾಶಾಂಕುಶವ ಕರದಲಿ |
ಪಡೆದ ವೇದವ ಮುಖದಿ ಸೂಚಿಸಿ |
ಯೊಡಲ ಸುತ್ತಿದ ಫಣಿಪತಿಯ ಮಣಿಮಯದ ಭೂಷಣದ ||

ಬಿಡದೆ ಭಜಿಸುವ ಸುಜನರಿಷ್ಟವ |
ಕುಡುವ ಮೂಲೋಕಂಗಳೊಡೆಯನೆ |
ಕಡು ಚೆಲುವ ಗಣನಾಥ ಪಾಲಿಪುದೊಲಿದು ಸಜ್ಜನರ ||೪||
ವಾಣಿ ಪುಸ್ತಕಲಲಿತವೀಣಾ |
ಪಾಣಿ ನಿಗಮಾದ್ಯಖಿಳಶಾಸ್ತ್ರ |
ಶ್ರೇಣಿ ಮಂತ್ರಸುತಂತ್ರಯಂತ್ರಾಕರ್ಷಣತ್ರಾಣೆ ||
ಜಾಣೆ ವಿದ್ಯಾಕಲೆಗಳೊಳು ಸು |
ತ್ರಾಣೆ ಸರಸಿಜಭವನ ಪಟ್ಟದ |
ರಾಣಿಯೊಲವಿಂ ಮಾಡುವುದು ಮನ್ಮತಿಗೆ ಮಂಗಳವ ||೫||
ನಿರುಪಮಿತ ನಿರ್ಲೇಪ ನಿರ್ಮದ |
ನಿರವಯವ ನಿಶ್ಚಿಂತ ನಿರ್ಮಲ |
ನಿರತಿಶಯ ನಿಷ್ಕಾಮ ನಿತ್ಯಾನಂದ ನಿರ್ದ್ವಂದ್ವ ||
ಪರಮಹಂಸ ಪರೇಶ ಪಾವನ |
ಚರಿತ ವಿದ್ಯಾಶಂಕರೋತ್ತಮ |
ಗುರುಪದಾಂಬುಜಯುಗಳಕಾನಮಿಸುವೆನು ಭಕ್ತಿಯಲಿ ||೬||
ಧರೆಯೊಳಗೆ ರಾಮಾಯಣಾಖ್ಯೆಯ |
ವರಕಥೆಯನೊಲವಿಂದೆ [ಜನಗಳ] |
ದುರಿತನಾಶನವೆಂದೊರೆದ ವಾಲ್ಮೀಕಿ ಮುನಿರಾಯ ||
ವರಮುನೀಶನ ಕರುಣೆಯಿಂದಲಿ |
ವಿರಚಿಸಿದ ಬುಧವಂಶಜನು ನರ |
ಹರಿಯೆನಿಪನಿಳೆಯೊಳಗೆ ಮೈರಾವಣನ ಕಾಳಗವ ||೭||

—ಅಂತು ಪೀಠಿಕಾಸಂಧಿ—

## —ಏರಡನೆಯ ಸಂಧಿ—

**ಸೂಚನೆ**|| ರಾಘವನ ಗೆಲಲಿಂದು ರಾವಣ ।
ಬೇಗದಲಿ ಪಾತಾಳಲಂಕೆಗೆ ।
ಪೋಗಿ ವೈರಾವಣಗೆ ಸೂಚಿಸಿ ಮರಳಿದನು ಪುರಿಗೆ ||

ಪಿತನ ಭಾಷೆಗೆ ರಾಘವನು ನಿಜ ।
ಸತಿವೆರಸಿ ವನವಾಸವಿರಲನು ।
ಚಿತದಿ ರಾವಣನುಯ್ದು ಜನಕಾತ್ಮಜೆಯ ಸೆಱೆಯಿಡಲು ||
ಸತಿಯನಱಸಲು ಕಪಿಕಟಕಸಹಿ ।
ತತಿಶಯದ ಸಿಂಧುವನು ಕಟ್ಟುತ್ರೆ ।
ವಿತತ ರಾವಣನುೞಿಯೆ ಕೊಂದನು ಸಕಲಸೇನೆಯನು ||೧||

ಮಡಿದುದಗಣಿತವಸುರಕುಲ ಸದೆ ।
ಬಡಿದನಗ್ಗದ ಕುಂಭಕರ್ಣನ ।
ಕಡಿದ್ದು ಬಿಡೆ ಕುಮ್ಮರಿಯ ತೆಱನಾಯ್ತು ಸುರಸೈನಿಕವು ||
ಬಿಡದೆ ಬೇಳುವ ಕೋಟಿಹೋಮದ ।
ಕಡಲು ಬಱಿ ದೊರೆಯಾದುದರಿಗಳ ।
ತಡೆಗಡಿವ ತೆಱನಾವುದೆಂದೆಣಿಸಿದನು ದಶಕಂಠ ||೨||

ಆದಶಾನನಸಿರವಱಿದು ಮಂ ।
ಡೋದರಿಯು ನಡೆತಂದು ಪತಿಗೊ ।
ಲ್ಡಾದರದ ಬುದ್ಧಿಯನು ಪೇಳ್ದಳು ಜನಕಜೆಯ ಕುಡಲು ||
ಕಾದಪನು ಶ್ರೀರಾಮನೆಂದೆನೆ ।
ಸೋದರರು ಸುತರೞಿದ ಮೇಲೇಂ ।
ಪೋದಪೆನೆ ಸೀತೆಯನು ಕೊಟ್ಟಾನುೞಿವನಲ್ಲೆಂದ ||೩||

ಈಗ ನಾವಿದನೆಣಿಸಿದರೆ ಸುರ ।
ನಾಗಯಕ್ಷರು ನಗುವರದಱಿಂ ।
ಪೋಗುವುದು ಕೇಳೊಡಲು ನಿಲ್ವುದು ಕೀರ್ತಿಯಪಕೀರ್ತಿ ||
ಭಾಗಿಸದೆ ದೇಹವನು ಪೆಱರಿಗೆ ।
ತಾಗಿದರಿಗಳ ಜಯಿಸಿ ಮಾಸಿಯ ।
ಬೇಗ ಪಡೆವೆನೆನುತ್ತೆ ಸಂತೈಸಿದನು ಮಾನಿನಿಯ ||೪||

ತನ್ನ ಸಖ ಮೈರಾವಣನು ಸಂ |
ಪನ್ನಭುಜಬಲನಾತನೆನ್ನೊಳು |
ಮುನ್ನವಾಡಿದ ಭಾಷೆಯೊಂದುಂಟೆಡರು ಸಂಭವಿಸೆ ||
ಭಿನ್ನವಿಲ್ಲದೆ ಸೂಚಿಸಲು ಒಂ |
ದೆನ್ನನುಳುಹುವೆನೆಂದನದಱಿಂ |
ದಿನ್ನು ಮೈರಾವಣನ ಕರೆತಹೆನೆಂದ ದಶಕಂಠ ||೫||

ಕಳೆದು ಹೋಯಿತು ದಿವಸ ದಿನಕರ |
ನಿಳಿದನಪರಾಂಭೋಧಿಸೆಳಯುಕೆ |
ಬೆಳಗಿದನು ಶಶಿ ಸಭದೆ ತಾರಾವಳಿಯು ಗಡಣದಲಿ ||
ಕಲಿ ದಶಾಸ್ಯನು ಕನಕರತ್ನಾ |
ವಳಿಯ ಭೂಷಣದೊಟ್ಟು ಕೈದುವ |
ನಳವಡಿಸಿ ಪಾತಾಳಲಂಕೆಯ ಪಯಣಕನುವಾದ ||೬||

ಪುರದ ಮಧ್ಯದೊಳೆಸೆವ ಕನಕದ |
ಸರಸಿಜದ ನಾಳದೊಳು ದಶಕಂ |
ಧರನು ತಾಸಿಳಿದೈದಿದನು ಪಾತಾಳಲಂಕೆಯನು ||
ಪುರದ ಕಾಹಿನವರಿಗೆ ತಾಜಂ |
ದಿರಹವನಱುಹಲು ಕೇಳಿದಾಕ್ಷಣ |
ಚರರು ಬಿನ್ನೈಸಿದರು ಮೈರಾವಣಗೆ ಕೈಮುಗಿದು ||೭||

ದೇವ ಬಿನ್ನಹವಾತ್ರಿಕೂಟದ |
ರಾವಣನು ನಡೆತಂದು ಪುರದ ನು |
ಹಾವನದ ಮಧ್ಯದಲಿ ತಾಸಿರುತಿರ್ದನೆಂದೆನಲು ||
ಭಾವದೊಳು ನಸುನಗುತಲಾಮೈ |
ರಾವಣನು ಮಂತ್ರಿಗಳ ಕಳುಹಲು |
ತೀವಿದುತ್ಸವದಿಂದ ಬಂದನು ವನವನೀಕ್ಷಿಸುತ ||೮||

ಜಂಬು ಚೂತ ತಮಾಲ ವಟ ದಾ |
ಳಿಂಬ ಚಂದನ ಪಾರಿಜಾತವು |
ನಿಂಬ ಪಾವನಪನಸ ವಕುಳವಶೋಕ ಪುನ್ನಾಗ ||

ತುಂಬುರರಳಿ ಲವಂಗ ಪ್ಲಕ್ಷ್ಯಾ |
ದುಂಬರಾರ್ಜುನ ಶ್ರೀಕರಾದಿ ಕ |
ದಂಬತರುವೊಪ್ಪಿದುವು ಸುಮಫಲಭರಿತಭಾರದಲಿ ||೯||

ನಾಳಿಕೇರವು ಬಿಳಿಯ ಗುಗ್ಗುಳ |
ತಾಳಪಂಚಕ ಸುರಗಿ ಹೊನ್ನರು |
ಟಾಳ ಕಪ್ಪುರ ಕದಳಿ ಪೂಗ ಪತಂಗ ಕಂಚಾಳ ||
ಬಾಟಿಕೆಯಾಮ್ಲಕ ಬಿಲ್ವವುರುಭೂ |
ತಾಳ ನವ ಕಿತ್ತಳೆಯು ಮೂಡಳ |
ಜಾಳತರುವೊಪ್ಪಿದುವು ಸುಮಫಲಭರಿತ ಭಾರದಲಿ ||೧೦||

ಮಲ್ಲಿಗೆಯ ಮೊಗ್ಗೆಗಳ ಜಾಜಿಯ |
ಬಳ್ಳಿಗಳ ಬಿಡಿಮುತ್ತು ಕೇದಗೆ |
ಸೆಳ್ಳರಳು ಸೇವಂತಿಗೆಯ ನನೆ ದವನ ಪಚ್ಚೆಗಳ ||
ಫುಲ್ಲನೀಲೋತ್ಪಲದ ತಿಳಿಗೊಳ |
ನಲ್ಲಿ ಝುಂಕಾರವನು ಮಾಡುತ |
ಮೆಲ್ಲನೂದಿತು ವಾಯುವಾದಶಕಂಠನಿದಿರಿನಲಿ ||೧೧||

ಹರಿಯುತಿಹ ಪಾತಾಳಗಂಗಾ |
ವರನದಿಯ ಕಾಲುವೆಯನಗಲಕೆ |
ಚರಿಸುತಿಹ ಗಂಧರ್ವಕಿನ್ನರಯಕ್ಷರಾಕ್ಷಸರ ||
ತರುಣಿಯರ ನಲಿದುಯ್ಯಲಾಡುವ |
ವರಸುಗಾನದ ರಾಗರಸಬಂ |
ಧುರದ ಗೀತವನಾಲಿಸುತ ದಶಗಳನು ನಡೆತಂದ ||೧೨||

ಪಾಡುತಿಹ ಗಿಳಿವಿಂಡುಗಳ ನಲಿ |
ದಾಡುತಿಹ ನವಿಲುಗಳ ಮೃದುದನಿ |
ಗೂಡುತಿಹ ಪಿಕತತಿಯ ಮೆಲ್ಲಡಿಯಿಡುವ ಹಂಸೆಗಳ ||
ಪೀಡಿಸುವ ವರಪಕ್ಷಿಗಳ ತೆಗೆ |
ದೋಡುತಿಹ ಚಾತಕವ ನಿಟ್ಟಿಸಿ |
ಯೋಡುತಿಹ ಪಾಱುವ ವಿಹಂಗಾದಿಗಳನೀಕ್ಷಿಸಿದ ||೧೩||

ಸುೞಿಯುತಿಹ ಕತ್ತೂರಿಯ ಮಿಗಗಳ |
ಬಳಸಿ ಬೞಿವಹ ಚಮರಿಗಳ ಕಂ |
ಗಳ ಹೊಳಹ ಹರಿಣಿಗಳ ಬಳಗವ ನೋಡುತೈತಂದ ||
ಎಳಲತೆಯ ಪಿಡಿದುಯ್ಯಲಾಡುವ |
ಬಲಿಮುಖದ ಕಂದಗಳ ನೋಡುತ |
ಕಲಿದಶಾನನ ಒರುತ ಕಂಡನು ಪುರದ ಸಂಭ್ರಮವ ||೧೪||

ಮಿಸುಪ ಮಿಸುನಿಯ ಕೋಟೆಯೇೞು |
ವಸರದುನ್ನತ ನೂಱುಯೋಜನ |
ಪಸರಿಸಿದ ಬಲುರನ್ನದೆನೆಗಳ ಕಳಸಕನ್ನಡಿಯ ||
ಸಸಿನವಪ ಕೊತ್ತಳದ ಸಾಲಿನ |
ನುಸುಳುಗಂಡಿಯ ಮುರುಹುಗಳ ಮುಂ |
ದೆಸೆವ ಕಲುಮುಳುವೇಲಿ ಪಡುಗಂಡಿಗಳನೀಕ್ಷಿಸಿದ ||೧೫||

ಅಟ್ಟಳೆಯ ಸಾಲುಗಳು ಪವನನ |
ಬಟ್ಟೆಯನು ಕಟ್ಟಿಹವು ಗಗನದೊ |
ಳಿಟ್ಟಣಿಸಿದುವು ರಾಯಡೆಂಕಣಿ ಕವಣೆಗಲ್ಲುಗಳು ||
ಕಟ್ಟಿರುವ ಕತ್ತರಿಯ ಸೂತ್ರದೊ |
ಳಟ್ಟೆಸೂಸುವ ಮಕರದಿಬ್ಬಯ |
ಬಟ್ಟೊಡೆಳೆಯುವ ಬಹಳ ಪಾಶದ ಬಲೆಗಳೊಪ್ಪಿದುವು ||೧೬||

ಬಳಸಿದಗೞುಗಳಲ್ಲಿ ಶರಧಿಯು |
ಹೞಿಯ ಕೂರ್ಮನ ಕಂಡಿಹವು ಮೇಣ್ |
ನೆಲದೊಳೆಸೆಯುವ ಜೋರಮಾಳಿಗೆ ಕಾಲುಕಣ್ಣಿಗಳ ||
ಬೆಳೆದ ಕತ್ತರಿವಾಳೆ ಸುತ್ತಲು |
ತುಳುಕುತಿಹ ನಂಜಿನಸದಿಯ ಮಡು |
ಸುೞಿಯುತಿರುತಿಹ ಜಲವಿಹಂಗಾದಿಗಳನೀಕ್ಷಿಸಿದ ||೧೭||

ಹುಲಿಮುಖದ ಮುರುಹುಗಳ ಮಾಲೆಯ |
ಬೞಿಯೊಳೆಸೆವ ಗಜಾಶ್ವ ಬಂಡಿಯ |
ಬಲುಭಟರು ಹೊತ್ತಿೞಿದು ಹೊಱಡುವ ಜೋರದಿಡ್ಡಿಗಳ ||

ಚೆಲುವ ಹೆಬ್ಬಾಗಿಲಿನ ಓಳಿಯಲಿ |
ಹಲವು ನೆಲೆಯುಪ್ಪರಿಗೆ ಹೇಮದ |
ಕಳಸ ಲೋಚನಕೆಸೆಯುತಿರಲೊಪ್ಪಿದುದು ರಚನೆಯಲಿ ||೧೮||

ನಿಂದ ಬಾಗಿಲ್ವಾಡದುಭಯದೊ |
ಳಂದವಡೆದ ಕವಾಟಬಂಧಗ |
ಳಿಂದ ಬಂಧಿಸಿ ಸರಪಣಿಯ ಕೊಂಡಿಗಳ ಬೀಯಗದ ||
ಹಿಂದೆ ಭಾರಿಯ ಲಾಳವಿಂಡಿಗೆ |
ಯಂದವನು ನೋಡುತ್ತ ಹರಹರ |
ನಂದಿವಾಹನ ! ಬಲ್ಲನೆನುತೊಳಹೊಕ್ಕ ದಶಕಂಠ ||೧೯||

ಪುರದಗಲವಿನ್ನೂರು ಯೋಜನ |
ದಿರವು ನೀಳವಿದೆಸಿತು ಮಂಗಳ |
ಕರದ ಹೆಸರಿಗೆ ಬಂದ ಹೆಬ್ಬಾಗಿಲುಗಳಿನ್ನೂರು ||
ಹಿರಿಯ ಸೂರಿಯವೀಥಿ ನೂರವ |
ತ್ತೆರಡು ಸಾವಿರ ಸೋಮವೀಥಿಯ |
ಹಂಗಣನ ಹನ್ನೆರಡು ಸಾವಿರವೆಸೆಯೆ ಚೆಲುವಿನಲಿ ||೨೦||

ಮತ್ತೆ ಬೀದಿಗಳೆರಡು ಕೆಲದೊಳು |
ಚಿತ್ತರದ ಶಶಿಕಾಂತ ಜಗತಿಯ |
ನುತ್ತಮದ ಭಿತ್ತಿಗಳ ತೊಲೆಗಳ ರನ್ನಬೋದಿಗೆಯ ||
ಸುತ್ತಿರಿದ ಮಣಿಕಾಂತಜಗತಿಯೊ |
ಳಾತ್ತ ಮದನನ ಹಸ್ತ ಕೇತನ |
ಚಿತ್ರತರ ತೋರಣದ ಸಾಲುಗಳಿಂದ ರಂಜಿಸಿತು ||೨೧||

ಕೇರಿಕೇರಿಯ ಬಾಗಿಲುಗಳೊಳು |
ಮೀಱಿ ಹೊಳೆಯುವ ವಜ್ರಮಣಿಮಯ |
ತೋರಣಂಗಳ ಮೇಲೆ ರಚಿಸಿದ ಕಳಸ ಕನ್ನಡಿಯ ||
ಮೇರುಗಿರಿಯಗ್ರದವೊಲೊಪ್ಪುವ |
ಚಾರುನೆಲೆವಾಡಗಳ ಕುಸುಕದ |
ಭಾರವಣೆ ಮಿಗೆ ನಗರವೆಸೆದಿರೆ ಕಂಡು ಬೆಱಗಾದ ||೨೨||

ಚಂದ್ರಕಾಂತದ ಖೇಡಕುಳಗಳ |
ಚಂದವಹ ನವಿಲುಯ್ಯಲೆಯ ಘನ |
ಮಂದಿರದ ಸಾಲೆಸೆದಿಹವು ನವರತ್ನರಚನೆಯಲಿ ||
ಬಂಧುರದ ಹೇಮದ ಕವಾಟಗ |
ಳಿಂದ ಮೆಱೆದಿಹ ಪೌಳಿಗಳ ಗುಡಿ |
ಗೊಂದಣದೊಳೆಸೆದಿರ್ಪವುಪ್ಪರಿಗೆಗಳಸಂಖ್ಯಾತ ||೨೩||

ರಸದ ಬಾವಿಯ ಗೇಹ ಗೇಹದೊ |
ಳೆಸೆವ ಚಿಂತಾಮಣಿಗಳಿರುತಿರೆ |
ಮಿಸುಪ ಪರುಸದ ಕಣಿಗಳೆಲ್ಲಾ ವೀಧಿವೀಧಿಯೊಳು ||
ಕುಶಲಕೆಲಸದ ನೀಲಶಿಲೆಗಳ |
ಪಸರಿಸಿದ ನೆಲಗಟ್ಟು ರಂಜಿಸೆ |
ಹೊಸಪರಿಯ ಪುರುವೆಸುತ ದಶಶಿರ ಹೊಗಲುತೈತಂದ ||೨೪||

ನಿಗಮಶಾಸ್ತ್ರ ಪುರಾಣದರ್ಥಾ |
ದಿಗಳ ಶಬ್ದವ್ಯಾಕರಣಕಾ |
ವ್ಯಗಳ ಮೀಮಾಂಸಾದಿ ತರ್ಕಪುರಾಣ ಪಠನೆಗಳ ||
ಮಿಗೆ ಸುಪಂಚಮಯಜ್ಞ ಜಪಹೋ |
ಮಗಳ ಹುತವಹ ಶ್ರಾದ್ಧಕರ್ಮಾ |
ದಿಗಳ ಕಳಕಳವೆಸೆಯೆ ರಾಕ್ಷಸಬುಧರ ಕೇರಿಯಲಿ ||೨೫||

ವರಧನುರ್ವಿದ್ಯೆಗಳ ಶಾಸ್ತ್ರದ |
ಪರಿವಿಡಿಯ ಸಂಧಾನಲಕ್ಷಣ |
ಹಿರಿಯ ಗರುಡಿಯ ಮನೆಯ ಬತ್ತೀಸಾಯುಧಶ್ರಮದ ||
ಪರುತವಣೆಯಿಂ ದಾರುಬಂಧನ |
ಕರಿತುರಗದೇಱಾಟದಬ್ಬರ |
ವುರವಣಿಪ ಕ್ಷತ್ರಿಯರ ವಿಧಿಯ ನೋಡುತೈತಂದ ||೨೬||

ಕೃಷಿಯು ವ್ಯವಹಾರಗಳು ಮೊದಲಾ |
ಗೆಸೆವಲಾಭದ ಗಣನೆ ಲೆಕ್ಕದ |
ಕುಶಲಗಳು ಕೊಡಬಲ್ಲ ಕ್ರಯವಿಕ್ರಯದ ಮುಂಗಡವ ||

ಹಸರವಿಕ್ಕುವ ರತ್ನಧಾನ್ಯ |
ಪ್ರಸರವಳತೆಯ ಬೆಲೆಯ ನಿಶ್ಚಯ |
ದೆಸೆವ ವೈಶ್ಯರ ಬೀದಿಯೊಳು ದಶವದನನೈತಂದ ||೨೭||

ಅಲಸದನುದಿನ ಜಾತಿ ಮೂಱರ |
ನೆಲೆಯುಱಿದು ಸೇವೆಯನು ಮಾಡು |
ತ್ತೊಲಿದು ಕೃಷಿಕಾರ್ಯಂಗಳಲಿ ಸಂತುಷ್ಟಮನರಾಗಿ ||
ಹಲವರೊಳಗಾಲಸ್ಯವಿಲ್ಲದೆ |
ಬೆಳೆದು ಭೂಪರಿಗೀವ ಶೂದ್ರರ |
ಹಲವು ಕೇರಿಯನೀಕ್ಷಿಸುತೆ ಬರುತಿರ್ದ ದಶಕಂತ ||೨೮||

ಮಾವುತರ ಮಂಡಳಿಕ ಮನ್ನೆಯ |
ರಾವುತರ ರಥಿಕರರು ಧೀರರ |
ಕೋವಿದರ ಸಾಮಂತ ಮಂತ್ರಿ ನಿಯೋಗ ಕರಣಿಕರ ||
ಹಾವಡಿಗರಾಕೇರಿ ನಟ್ಟುವ |
ಕೇವಣಿಗ ಸರವಂತ ಮಾಯಾ |
ಕೋವಿದರ ಬೀದಿಗಳ ನೋಡುತ ಬಂದ ದಶಕಂಠ ||೨೯||

ಹೆಸರಿಸಿದ ಪಾಂಚಾಳ ಚಿಪ್ಪಿಗ |
ಕುಶಲಕಾರ್ಯದ ಶಿಲ್ಪಿಕ ಮೃಗ |
ವ್ಯಸನಿ ಮಲ್ಲರ ಕೊಲ್ಲಟಿಗರ ಸುಭಟ್ಟಮಾಗಧರ ||
ಅಸಗ ನಾವಿಕ ಬೇಡ ತೈಲಿಗ |
ಕಸವ ತೊಳೆವ ಕುಲಾಲ ಮುಚ್ಚಿಗ |
ರೆಸೆವ ವೀಥಿಗಳೊಳಗೆ ಬರುತಿರ್ದನು ದಶಗ್ರೀವ ||೩೦||

ಉಲಿವ ಶಕುನಿಯ ಮಂಚ ಬೇಟವ |
ಬಳೆಯುತಿಹ ಖಗವಿತತಿ ಹಕ್ಕಿಯ |
ಗಳದುಲುಹು ಕೊಕ್ಕೋಕಶಾಸ್ತ್ರದ ಕಾಮಬಂಧಗಳ ||
ಕಲಿಸುತಿಹ ದೂತಿಯರ ಪಟಸಂ |
ಕುಲದ ಸರಸವಿನೋದದಿರವಿನ |
ನಿಳಯವೆನಿಸುವ ಸೂಳೆಗೇರಿಯ ನೋಡುತೈತಂದ ||೩೧||

ಚರಣಯುಗಳದ ನೇವುರಂಗಳ |
ಕರದ ಕಂಕಣ ತೋಳ ಬಳೆಗಳ |
ಬೆರಳ ಮುದ್ರಿಕೆ ಹಾರಪದಕದ ರತ್ನದೋಲೆಗಳ ||
ಶಿರದ ಸೀಸಕ ಮೂಗುತಿಯ ಹೊಸ |
ಪರಿಯ ವೇಷವ ಧರಿಸಿದಂದದಿ |
ತರುಣಿಯರು ಸುಳಿದಾಡುತಿರ್ದರು ಕೇರಿಕೇರಿಯಲಿ ||೩೨||

ಅಂದಣದ ಕರಿ ತುರಗ ರಥಗಳ |
ಸಂದಣಿಯ ಕಾಲಾಳ ಸುಭಟರ |
ಗೊಂದಣದ ಶುಭಕರದ ಮಂಗಳವಾದ್ಯರಭಸಗಳ ||
ಮಂದಿ ನೆರೆದಿಹ ವೀಧಿ ವೀಧಿಯೊ |
ಳಂದ ಮಿಗೆ ಬರಬರಲು ಮೋದದಿ |
ಮುಂದೆ ಕಂಡನು ಕಂಕಣಾದೇವಿಯರ ದೇಗುಲವ ||೩೩||

ಹೊಳೆವ ಮಣಿಮಾಡಗಳ ಚಿತ್ರಾ |
ವಳಿಯ ಭಿತ್ತಿಯ ಭದ್ರಮಂಟಪ |
ಕಳಸ ಕನ್ನಡಿ ತೋರಣಂಗಳ ಗುಡಿಗಳೊಗ್ಗಿನಲಿ ||
ಬಳಸಿ ನೋಡಲು ನವಿಲ ಕೊರಳಿನ |
ಹಲವು ವರಗಳ ಕೊಡುವೆ ಬಾರೆಂ |
ದೊಲಿದು ಕರೆವಂದದಲಿ ಪಾರ್ವರ ನಿಕರವೊಪ್ಪಿದುದು ||೩೪||

ಬಳಸಿ ಬೆಳೆದಿಹ ತೋಟದೊಳು ಸುಮ |
ಫಲಗಳಿಂದಿಹ ಭೂರಿ ಭೂರುಹ |
ದುಲಿವ ಖಗಸಂಕುಳದ ಹಗೆಯುಳಿದಿಹ ಮೃಗಾವಳಿಯ ||
ನಳಿನ ಕುಮುದೋತ್ಕರದ ಕೊಳಗಳ |
ಜಳದ ತಂಗಾಳಿಗಳ ತಂಪಿನ |
ಸುಳಿಯುವಿಂಪಿನ ಪರಿಮಳದ ಪೂರದಲಿ ರಂಜಿಸಿತು ||೩೫||

ಅಮಹಾದೇವಿಯರ ಮುಂಗಡೆ |
ಕಾಮಿತವ ಬಯಸಿರ್ಪುದಸುರ |
ಸ್ತೋಮ ಹರಕೆಯನಿತ್ತು ವರಗಳ ಪಡೆದು ಮರಳುವರ ||

ಭೀಮವಿಕ್ರಮದೈತ್ಯರನು ಕಂ |
ಡಾಮಹೋತ್ಸವದಿಂದೆ ಬರೆ ಬರೆ |
ತಾಮಸದ ಕರ್ಕಶದ ಬಹುರೌದ್ರವನು ನೋಡಿದನು ||೩೬||

ಪಿಡಿದ ಕಂಕರಿಕೆಗಳ ಸೊಸಲಲಿ |
ತೊಡೆದ ಕುಂಕುಮ ಗಂಧ ಕವಡೆಯ |
ಸಿಡುಸರದ ಸೊಂಪುಡಿಯ ಶಂಖದ ಮಣಿಯ ಭೂಷಣದ ||
ಬಿಡದೆ ಬೀಸುವ ನವಿಲ ಚಾಮರ |
ದಡಿಕೆಗಳ ಬಿಚ್ಚೋಲೆ ರಾಗಟೆ |
ಗೆಡೆದ ಭೋರೆಂದೆಂಬ ಸಿಡುನೆಗವಿಗಳನೀಕ್ಷಿಸಿದ ||೩೭||

ಅರಿದ ಕೋೞಿಯ ತಲೆಯ ರಾಸಿಯ |
ಮುರಿದ ನವಿಲಿನ ಕೊರಲ ಬಂಬಲ |
ತರಿದ ಕುಱಿಯೊಟ್ಟಲಿನ ಖಂಡಿಸ ಬಿದ್ದ ಹೋತುಗಳ ||
ತರಿದ ಕೋಣನ ಹಿಂಡುಗಳನುಱಿ |
ಮೆಱೆವ ಕೂೞಿನ ಬಲಿಯ ರಾಸಿಯ |
ಹಿರಿಯ ಮದ್ಯದ ಘಟಗಳನು ನೋಡುತ್ತ ನಡೆತಂದ ||೩೮||

ಕೊಂಡದೋಕುೞಿಯಾಡುವರನುರಿ |
ಗೆಂಡದೊಳು ಹೊರೞುವರ ಮಿಗೆ ತರಿ |
ಗೆಂಡದೊಳು ಮೀಯುವರನುರಿಯೊಳು ಹೊಕ್ಕುಹೊಱಡುವರ||
ಕಂಡಗಳ ಕೊಯ್ದಿಡುವ ಕರುಳಿನ |
ದಂಡೆಗಳ ತೆಗೆತೆಗೆದು ಮುಡಿಸುವ |
ಗಂಡುಗಲಿ ದಾನವರ ನೆರವಿಯ ನೋಡುತೈತಂದ ||೩೯||

ನೆತ್ತಿಗಳ ಕೊರೆಕೊರೆದು ಕರುಳಿನ |
ಬತ್ತಿಗಳ ಹೊಸೆದಿಕ್ಕಿ ದೀಪವ |
ಹೊತ್ತಿಸುವ ಹರಕೆಗಳನೀವರು ಕೆಲರು ನಾಲಗೆಯ ||
ಕತ್ತರಿಸಿ ತೆಗೆದೀವ ಕರುಳನು |
ಕಿತ್ತು ಗುಡಿಗಳ ಕಟ್ಟಿ ಕುಣಿಯುತೆ |
ಸುತ್ತಿ ಬಹ ದೈತ್ಯರ ಸಮೂಹವ ನೋಡುತೈದಿದನು ||೪೦||

ಕಾಲು ಕೈಗಳ ಕಡಿದು ಕಾಯುವ |
ಸೀೞಿ ದಿಗುಬಲಿಗೊಡುವ ವೀರರು |
ಬಾಳುದೊಡ್ಡಿಯ ಕೊಟ್ಟು ನೆತ್ತಿಯೊಳಲಗ ಕೀಲಿಸುವ ||
ಶೂಲದಲಿ ಬೀೞುವರ ಬಸಿಱನು |
ಸೀೞಿ ರಕುತವ ತೋಡಿ ಚೆಲ್ಲುವ |
ಕಾಳರಾಕ್ಷಸ ಸಂಕುಲವ ನೆಱೆ ನೋಡುತೈತಂದ ||೪೧||

ಬೆರಲುಗಳ ಸಮಿಧೆಗಳ ಕಂಡದ |
ಚರು ಕಪಾಲದ ಪಾತ್ರದೊಳು ಬಿಸಿ |
ಸೊರೆಯ ರಕ್ತಾಜ್ಯದಲಿ ನರ ದರ್ಭೆಯ ಪವಿತ್ರದಲಿ ||
ಬಱಿಯೆಲುವಿನಿಂದಾಗಲಗ್ನಿಯ |
ಸುರುಬಿ ಹೋಮವ ಬೇಳಿ ಕಡೆಯಲಿ |
ಶಿರವ ಪೂರ್ಣಾಹುತಿಗೆ ಕೊಡುವರ ನೋಡುತೈತಂದ ||೪೨||

ಸಿಡಿದಲೆಯ ಕೊಟ್ಟಿರಿದ ತಲೆ ಬೊ |
ಬ್ಬಿಡಲು ಕರದಲಿ ಪಿಡಿದ ಮುಂಡವು |
ನಡೆದು ಮೈಯ್ಯಿಕ್ಕುತ್ತ ರಿಂಗಣಗುಣಿದು ನಲಿವವರ ||
ಕಡಿದು ರುಂಡವ ಮುಂಡದಗ್ರದಿ |
ಬಿಡದೆ ಸುರಿವರುಣಾಂಬುಧಾರೆಯ |
ಹಿಡಿದು ನಿಜಕರಗಳಲಿ ತರ್ಪಣವೀವರನು ಕಂಡ ||೪೩||

ಮಸೆದಲಗಿನಿಂದಿರಿದು ರಕುತವ |
ಒಸಿಯುತಭಿಷೇಕವನು ಮಾಡುವ |
ಬಸಿಱ ಬಗಿಯುತೆ ಕರುಳಿನಿಂ ದೇವತೆಯನರ್ಚಿಸುವ ||
ನಸುನಗುತ ಕೈಗಳನು ತುಂಡಿಸಿ |
ಬಸಿವ ಮುಂಡದಿ ದಂಡವನು ವಿರ |
ಚಿಸುವ ದನುಜೇಶ್ವರರ ನೆರವಿಯ ನೋಡುತೈತಂದ ||೪೪||

ಸಿಕ್ಟಟದ ಹರಕೆಗಳ ಕಾಣುತ |
ಮೆಚ್ಚಿ ದೇವತೆಯುವರ ಹರಣವ |
ಬೆಚ್ಚಱದ ವರವಿತ್ತು ಮೆಯ್ಗಳ ತಡಹಲವರೆದ್ದು ||

ತಚ್ಚರಣಗಳೊಳವರ ಪರಿಪರಿ |
ಯಿಚ್ಛೆಗಳ ವರವಾನುತಿಪುದೊಂ |
ದಚ್ಚರಿಯ ಕಾಣುತ್ತ ತಲೆದೂಗಿದನು ದಶಕಂಠ ||೪೫||

ಆಸುಱದ ಹರಕೆಗಳನುಱಕಿ ಕಂ |
ಡಾಸುರೇಶ್ವರವೈರಿ ರೋಮವಿ |
ಲಾಸದಲಿ ನಡೆತಂದು ಹೊಕ್ಕನು ದೇವಿಯಾಲಯವ ||
ಭಾಸುರದ ತೂರ್ಯತ್ರಯಂಗಳ |
ಘೋಷ ತೀವಿದ ಸಂಭ್ರಮವ ಕಂ |
ಡಾಸಮಯದಲಿ ದೇವಿಯುರನವ ಸುತಿಸುತ್ತೈತಂದ ||೪೬||

ಜೋಹರಿಸ ರಂಜಿಸುವ ಕನಕದ |
ಗೇಹಮಧ್ಯದ ಮಂಡಪದೊಳವ |
ಗಾಹಿಸುವ ಸಾಲಗೆಯ ಮಹಿಮೆಯ ಸಿಂಹವಿಷ್ಟರದಿ ||
ಮೋಹಿಸುವ ಶೃಂಗಾರ ಕಾಂತಿಯ |
ದೇಹ ರವಿಕೋಟಿಗಳ ಮಸುಳಿಸೆ |
ಯೂಹಿಸಲ್ಕಳವಲ್ಲದೆಸೆದಳು ಕಂಕಣಾದೇವಿ ||೪೭||

ಗುಡುಗುಡಿಪ ಡಮರುಗದ ಶೂಲದ |
ಕಡುಗ ಹಲಗೆಯ ಶಂಖಚಕ್ರದ |
ಜಡಿವ ಧನುಶರವೆಸೆವ ವರದಾಭಯದ ಹಸ್ತಗಳ ||
ಕಡುಚೆಲುವಿನಾಮೂರ್ತಿಯನು ಯಿವೆ |
ಮಿಡುಕದೀಕ್ಷಿಸಿ ಭಕ್ತಿರಸದೊಳ |
ಗೊಡಲನೀಡಾಡಿದನು ಕಂಕಣದೇವಿಯಿದಿರಿನಲಿ ||೪೮||

ತ್ರಾಹಿ ಭುವನೇಶ್ವರಿಯೆ ಶಂಕರಿ |
ತ್ರಾಹಿ ಭುಕ್ತಿಸುಮುಕ್ತಿದಾಯಕಿ |
ತ್ರಾಹಿ ಮಾಯಾಶಕ್ತಿ ತ್ರೈಜಗಭರಿತೆ ಜಗನಮಿತೆ ||
ತ್ರಾಹಿ ನಿತ್ಯಾನಂದೆ ನಿರ್ಮಲೆ |
ತ್ರಾಹಿ ತತ್ವಜ್ಞಾನರೂಪಿಣಿ |
ತ್ರಾಹಿ ಪಾಲಯ ಮಾಮೆನುತೆ ನುತಿಸಿದನು ದಶಗಳನು ||೪೯||

ದೇವತೆಯ ಬಳಸಿನಲಿ ಮೆಱೆದರು |
ದೇವಿ ಶಾಕಿನಿದೇವಿ ಮುಕ್ತಾ |
ದೇವಿ ಭದ್ರಾದೇವಿ ಶಲ್ಯಾದೇವಿ ಹರದೇವಿ ||
ದೇವಿ ಕಂಕಣದೇವಿ ಮಾರುತ |
ದೇವಿ ರುದ್ರಾದೇವಿ ಗೌತಮಿ |
ದೇವಿಯರು ನೆಲಸಿದರು ತಮ್ಮೊಂದುಗ್ರತೇಜದಲಿ ||೫೦||

ಕಾಳರಾತ್ರಿ ಕರಾಳಿ ಚಂಡಿಯು |
ಕಾಳರೂಪಿ ಕಪರ್ದಿ ಕಾರ್ಮುಕ |
ಕಾಲಕಕ್ಷು ಕಪಾಲಿ ಜ್ವಾಲಾಮಾಲೆ ಹುಂಕಾರಿ ||
ಕಾಳಿ ಮಾಹಂಕಾಳಿ ಜಟನೀ |
ಲೋಲೆ ವಿಷಭಕ್ಷಿಣಿ ಮಹೋದರೆ |
ಶೂಲಿ ಕಂಕಾಳಿನಿಯಧೋಮುಖಿಯೆಂಬರೊಪ್ಪಿದರು ||೫೧||

ಕಂಡು ಹರ್ಷಿತನಾಗಿ ಮುದ ಮುಂ |
ಕೊಂಡು ದೇವಿಯ ಚರಣಕಮಲದಿ |
ದಿಂಡುಗೆಡೆದುದ್ರೇಕಭಕ್ತಿಯೊಳೊಡಲನೀಡಾಡಿ ||
ಖಂಡಶಶಿಮಂಡಲೆ ಮಹೇಶ್ವರಿ |
ಚಂಡರೂಪಿಣಿ ವರವ ಕರುಣಿಸು |
ಗಂಡುಗಲಿ ರಾಘವನ ಜಯಿಸಲೆನುತ್ತ ಹೊಱವಂಟ ||೫೨||

ಕಂಕಣಾದೇವಿಯರ ಶ್ರೀಪದ |
ಪಂಕಜವ ಬೀಱ್ಕೊಂಡು ರಾವಣ |
ಭೋಂಕನೈತರುತಿರ್ದನಗ್ಗದ ರಾಜವೀಧಿಯಲಿ ||
ಮುಂಕಡೆಯ ರವಿಕಿರಣಲಹರಿಯ |
ಲಂಕರಣರಚನೆಗಳ ಬಹುಳಿ |
ಶೃಂಕ ಮೈರಾವಣನ ಭವನವ ಕಂಡನಸುರೇಂದ್ರ ||೫೩||

ಬಿಗಿದ ಱಿಂಚೆಯ ವಾರಣದ ಕೈ |
ದುಗಳ ತೀವಿದ ತೇರಸಂಕುಲ |
ಮಿಗೆ ಹಯುಗಳನು ಕಿತ್ತ ಬತ್ತೀಸಾಯುಧದ ಭಟರ ||

ಅಗಣಿತದ ಕೊಲ್ಲಣಿಗೆ ಚಕ್ರಾಂ |
ಗಗಳ ಸಾಲಿನ ಸಂದಣಿಗಳಲಿ|
ಹುಗುವ ರಾಜದ್ವಾರವನು ತಾ ಕಂಡು ಬೆಱಗಾದ ||೫೪||

ಸುರಪುರಿಗೆ ಹರಪುರಿಗೆ ಯಳಕಾ |
ಪುರಿಗೆ ಲಂಕಾಪುರಿಗೆ ವಹ್ನಿಯ |
ಪುರಿಗೆ ವರುಣನ ಪುರಿಗೆ ನಿರುತಿಯ ಪುರಿಗೆ ಯಮಪುರಿಗೆ ||
ಭರದೆ ವಾಯುವ ಪುರಿಗೆ ಮೇಣಾ |
ಸರಸಿಜೋದ್ಭವಪುರಿಗೆ ನೂರ್ಮಡಿ |
ಪರಿಕಿಸಲು ಚೆಲುವಿನಲಿ ತಾನೆನೆ ರಂಜಿಸಿತು ನಗರಿ ||೫೫||

ಇಂದುಕಾಂತದ ಕೋಟೆ ರತುನಗ |
ಳಿಂದಲಂದಂಬಡೆದ ಬಾಗಿಲ |
ಮುಂದೆಸೆವ ವರಮಕರತೋರಣದಿಂದೆ ಪುರವೆಸೆಯೆ ||
ಹೊಂದಿಸಿದ ಬಲು ಲಾಳವಿಂಡಿಗೆ |
ಸಂಧಿಸಿದ ಸುಗವಾಕ್ಷ ಬೀಗದ |
ಬಂಧುರದ ಲಂಕಾಪುರದ ಬಲುಸೊಗವ ನೋಡಿದನು ||೫೬||

ಮದಗಜದ ಶಾಲೆಗಳನಗ್ಗದ |
ಕುದುರೆಗಳ ನವರತ್ನಮಯದ |
ಭ್ಯುದಯ ಮಂದುರತತಿಯ ಕೊಲ್ಲಾರಿಗಳ ಲಾಯಗಳ ||
ಒದವಿದಗಣಿತ ಗೋಮೃಗಂಗಳ |
ಸದನಶಾಲೆಯ ಜೇನಸಾಲೆಯ |
ವಿದಳಧಾನ್ಯದ ಕಣಜಗಳನೀಕ್ಷಿಸುತ ನಡೆತಂದ ||೫೭||

ಹತ್ತಿಸಿದ ಮಣಿಹೋಮಮಂಟಪ |
ದುತ್ತಮದ ರವಿಕಾಂತಿಯನು ಜಱಿ |
ಯುತ್ತಲಿರೆ ಮಜ್ಜನದ ಭೋಜನಶಾಲೆಯುಗ್ರಾಣ ||
ಯುಕ್ತಜಿತ ಭಂಡಾರ ಚೊಕ್ಕಸ |
ಮುತ್ತೆಸೆವ ಕುಡಿನೀರ ಚೌಕಿಗೆ |
ಯೊತ್ತಿನಲಿ ಫಲನಿಕರಕಜ್ಜಾಯಗಳ ಮನೆಯೆಸೆಯೆ ||೫೮||

ಗರುಡಿಯೋಲಗಸಾಲೆ ಹೋಮದ |
ಹಿರಿಯ ನೆಲೆಯುಪ್ಪರಿಗೆ ಮಂಗಳ |
ತರದ ಮಂದಿರ ದೇವಪೂಜೆಯ ನಿಳಯಗಳ ನೋಡಿ ||
ಅರಸಿಯರ ನೆಲೆವಾಡ ಮಿಕ್ಕಿನ |
ತರುಣಿಯರ ಸಾಲೆಸೆವ ಕೋಟೆಯ |
ವಿರಚಿಸಿದ ಮಣಿಮಯದ ಶಯ್ಯಾಲಯಗಳೊಪ್ಪಿದುವು ||೫೯||

ಸುಂದರದ ತೋಟನಲಿ ಬೆಳೆದಿಹ |
ಗೊಂದಣದ ಫಲಭರಿತ ಭೂರುಹ |
ದಿಂದ ನಾನಾವಿಹಗಸಂತತಿಯೊಂದು ಕಳಕಳದ ||
ಇಂದುಸಖತಾವರೆಯ ಕೊಳಗಳ |
ಮುಂದೆ ನವಿಲುಯ್ಯಾಲೆಯ ಕ್ರೀಡಾ |
ಮಂದಿರದ ಮಣಿಮಾಡವೆಸೆದುದನಂತರಚನೆಯಲಿ ||೬೦||

ಈಪರಿಯೊಳೆಸೆದಿರವಿನರಮನೆ |
ಯಾಪರಿಯ ವಿಸ್ತರವನೆಲ್ಲವ |
ನಾಪರಸ್ಪರವಾಡಿಯುತಂತಸ್ತಿಗರ ವಚನದಲಿ ||
ಈಪುರವ ಹೋಲುವವೆ ಪುರಗಳು |
ಕಾಪುರಗಳೆಂದೆನುತ ಮನದೊಳ |
ಗಾಪರಿಯ ಸಂತಸದೆ ರಾಜಾಲಯವನೊಳಪೊಕ್ಕ ||೬೧||

ಹಲವು ಬಾಗಿಲ ಕಳೆಕಳೆದು ದಶ |
ಗಳನು ಬರೆ ಮೈರಾವಣನು ಮನ |
ದೊಳಗೆ ನಲಿಯುತ ಬಂದೆಡಗಿದೊಡೆ ತೆಗೆದು ಬಗಿಯಪ್ಪಿ ||
ಒಳಗಿನೋಲಗಸಾಲೆಗೀತನ |
ನೊಲವಿನಿಂ ಕೈವಿಡಿದು ಕೊಂಡು |
ಯ್ದುಲಿಹಿದನು ಮಣಿಖಚಿತಸಿಂಹಾಸನದಿ ರಾವಣನ ||೬೨||

ತರುಣಿಯರ ಕೈಯಿಂದ ಪಡಿಗವ |
ತರಿಸಿ ಚರಣವ ತೊಳೆದು ದಿವ್ಯಾಂ |
ಬರದೆ ಗಂಧಾಕ್ಷತೆಗಳಿಂದುಪಚರಿಸಿ ವೀಳೆಯವ ||

ಕರದೊಳೀಯುತ ಕ್ಷೇಮಕುಶಲವ |
ನೊರೆಯ ಹೇಳಲು ರಾವಣನು ನಿಜ |
ಹರುಷ ತುಟ್ಟಿಸಲೈದೆ ನೋಡಿದನಾಗ ಕೆಲಬಲನ ||೬೪||

ಎತ್ತ ನೋಡಿದೊಡತ್ತ ಮಣಿಗಳು |
ತೆತ್ತಿಸಿದ ಕುಂಡಲ ಕಿರೀಟದ |
ಮುತ್ತಿನೆಕ್ಕಾವಳಿಯ ಕಂಕಣ ಬಾಹುಪೂರಗಳ ||
ರತ್ನಮುದ್ರಿಕೆ ಕಡೆಯ ಹೆಗಲೊಳು |
ಹೊತ್ತ ಹಿರಿಯುಬ್ಬಣದ ದನುಜರ |
ಮೊತ್ತ ಕೋಟಿಯ ನೋಡಿದನು ಖಳರಾಯ ಬಳಸಿನಲಿ ||೬೫||

ಅಳಿಗುರುಳ ಭ್ರೂಲತೆಯ ಕಂಗಳ |
ಹೊಳಹುಗಳ ವರವದನ ಕಾಂತಿಯ |
ಕಳಸಕುಚಗಳ ಕಂಬುಗಳ ನಳಿತೋಳ ಸೆಳ್ಳುಗುರ ||
ತೆಳುವಸಿಱ ಸುೞಿನಾಭಿ ಜಘನ |
ಸ್ತಳದ ಚೆಲುವಿನ ಚರಣಕಾಂತಿಯ |
ಲಲನೆಯರ ಬೆಳಗಿನಲಿ ರಾಜಾಸ್ಥಾನ ರಂಜಿಸಿತು ||೬೬||

ಖಳಪತಿಯ ಗದ್ದುಗೆಯ ಬಲದಲಿ |
ಹೊಳೆವ ನೀಲೋತ್ಪಲದ ಕಾಂತಿಯ |
ತೊಳಪ ಕಾಯದ ನಗೆಮೊಗದ ಖಃ ತಿಲಕನಾರೆನುತ ||
ಲಲಿತ ಕಂಬುಸುರೇಖೆಗಳ ನವ |
ಚೆಲುವ ಮಂಗಳ ಲಕ್ಷಣದೊಳಿಹ |
ಲಲಿತಕಾಯುವ ಕಂಡು ಬಡದೀಕ್ಷಿಸಿದ ದಶಕಂಠ ||೬೭||

ಈತನಾರ ಕುಮಾರನತಿವಿ |
ಖ್ಯಾತನೈ ಲಕ್ಷಣದೊಳಗೆ ಪುರು |
ಹೂತಗಿಮ್ಮಡಿಯಹನು ಸಾಮುದ್ರಿಕದ ಗಣನೆಯಲಿ ||
ಈತನೀಪಟ್ಟಣದ ಪಟ್ಟವ |
ನೋತು ಧರಿಸುವ ಲಕ್ಷಣಜ್ಞ ವಿ |
ನೀತನಾರೆಂದೆನಲು ಮೈರಾವಣ ನಿರೀಕ್ಷಿಸಿದ ||೬೮||

ತನ್ನನುಜೆ ದುರುದುಂಡಿಸುತನಿವ |
ನೆನ್ನಳಿಯ ನವನೀಲವರ್ಣನು |
ಉನ್ನತದ ತೇಜದಲಿ ಸಲಹಿದೆನತಿಪರಾಕ್ರಮಿಯ ||
ಎನ್ನಲಾಮಾತಿನಲಿ ರಾವಣ |
ತನ್ನ ತಮ್ಮ ವಿಭೀಷಣನವೋ |
ಲಿನ್ನು ನಿನಗಿವ ಮಾಡಲುಳ್ಳವನೆನುತೆ ನಸುನಕ್ಕ ||೯||

ಎನಲು ಮೈರಾವಣನು ತನ್ನಯ |
ಮನದೊಳಗೆ ದಶಕಂಠ ಹೇಳಿದ |
ಘನತರದ ನೀತಿಯನು ನಿಶ್ಚಯಿಸಿದನು ತತ್ಕ್ಷಣದೆ ||
ಜನಿಸಿದುದು ವೈರಾಗ್ನಿಯಿನ್ನೀ |
ದನುಜಪತಿಯೈತಂದ ಕಾರಿಯ |
ದನುವ ಕೇಳುವೆನೆಂದು ವಿನಯದಿ ನುಡಿಸಿದನು ಖಳನ ||೨೦||

ಬಿತ್ತರಿಸು ದಶಕಂಠ ಬರವಿನ |
ತತ್ತ ಕಾರ್ಯವದೇನನಿತ್ತಪೆ |
ನುತ್ತಮವಿದೈ ಸಲೆ ಮಹಾಪ್ರಿಯತಮರ ದರುಶನವು ||
ಹೊತ್ತುಗಳೆಯದೆ ಹೇಳೆನಲು ತಲೆ |
ಗುತ್ತಿ ರಾವಣ ನುಡಿಯೆ ತನ್ನಯ |
ಕತ್ತಿಗೊಡ್ಡಿದ ಕದನದಿರವನು ಹೇಳಲೇನೆಂದ ||೨೧||

ಸೀತೆಯೆಂಬಳ ಕಂಡು ನಾ ಮನ |
ಸೋತು ಸೆರೆಯನು ತಂದೆ ಕಪಟದೊ |
ಳಾತಳೋದರಿಯರಸ ರಾಮನೆನಿಪ್ಪ ಭೂವರನು ||
ಕಾತರಿಸಿ ತನ್ನನುಜ ವಾನರ |
ಯೂಥ ಸಹಿತೈತಂದು ಶರಧಿಗೆ |
ಸೇತುವನು ಕಟ್ಟಿದನು ಮುತ್ತಿದನೇನ ಹೇಳುವೆನು ||೨೨||

ಕಾಳೆಗದೆ ಖಯಖೋಡಿಯಿಲ್ಲದೆ |
ಕಾಳರಾಕ್ಷಸಸೇನೆ ಸಹಿತವೆ |
ಹೇಳಲೇನೆನ್ನನುಜತನುಜರು ಬಿದ್ದರಗಣಿತವು ||

ತಾಳುವವರಿನ್ನಿಲ್ಲ ಒವರವ |
ಮೇಳವಿಸುತೆನ್ನಾಳು ಸಹಿತವೆ |
ಕೇಳು ಮೈರಾವಣನೆ ರಣವೃತ್ತಾಂತದೊಂದಿರವ ||೭೩||

ಇಂದು ಪರಿಯಂತದಲಿ ತನ್ನಯ |
ನಂದನರು ಸಹ ತನ್ನ ಬಾಂಧವ |
ವೃಂದ ಸೇನಾನಿಕರವೆಲ್ಲವು ರಾಮನೊಳು ಹಳಚಿ ||
ಹೊಂದಿಹೋಯಿತು ರಣದೊಳಗೆ ಖಳ |
ಮಂದಿನರೆ ತಾನುಳಿಯೆ ಕೇಳೈ |
ಮುಂದೆ ನೀನೇ ಬಲ್ಲೆಯೆಂದನು ಮಿಡಿದು ಕಂಬನಿಯ ||೭೪||

ಕೇಳಿ ಮೈರಾವಣನು ನುಡಿದನು |
ಕಾಳುಮಾಡಿದೆ ರಾಜಕಾರ್ಯವ |
ನಾಳು ಬೀಳಿದ ಮುನ್ನ ನೀ ಬಂದೆನಗೆ ಸೂಚಿಸದೆ ||
ಜಾಳು ಮಾಡಿದೆ ಬಲವ ಹಿಂದಣ |
ಸೋಲವನು ನೆನೆದೇನು ಫಲ ದಿವಿ |
ಜಾಳಿ ನಗುವಂತಾಯ್ತೆನುತ ತಲೆದೂಗಿದನು ದನುಜ ||೭೫||

ಪರಸತಿಯ ಕದ್ದುಯ್ದು ದೋಷದೆ |
ಧುರದ ಜಯಸಿರಿ ಹಿಂಗಿದಳು ಶಂ |
ಕರನು ನಿನಗಿದಿರಿಲ್ಲ ಕೆಡಿಸಿದೆ ರಾಜಕಾರಿಯವ ||
ಗೆಲವು ಮುಂದೆಲ್ಲಿಯದು ತನ್ನನು |
ತಿಳುಹಿ ಬುದ್ಧಿಯ ಪೇಳಿನುತೆ ಕಥೆ |
ಹೊಲಬುದೋಱದು ಬುದ್ಧಿ ಕಾಮುಕಗೆಂದನಸುರೇಂದ್ರ ||೭೬||

ಹಿಂದಣವಗುಣಗಳನು ನೆನೆದರೆ |
ಚೆಂದವಲ್ಲದು ನಿಲಲಿ ಕೊರಳಿಗೆ |
ಬಂದ ವೇಳೆಯನಱಿದು ಮಾಳ್ಪುದು ನಯವಱಿಯೆ ತಿಳಿದು ||
ಇಂದು ಸೀತೆಯನಿತ್ತು ರಾಮನ |
ಸಂಧಿಯನು ಮಾಡಿದಡೆ ಬದುಕುವೆ |
ಖಿಂದು ನಾನಿದ ನುಡಿಯಲಾಗದು ತುದಿಗೆ ಹಿತವೆಂದ ||೭೭||

ಕೇಳಿದೆವಲಾ ಧರ್ಮಶಾಸ್ತ್ರವ |
ಹೇೞಿಯುೞುಹಿದೆ ಸಾಕು ರಣದೊಳು |
ನಾಳೆ ಹಂಗಿನ ರಾವಣನೆ ನಿನ್ನೊಡನೆ ಮಾತೇನು ||
ಖೂಳರಾವೆಂದೆನುತೆ ಖಳಪತಿ |
ಯೇೞಿ ಮೈರಾವಣನು ದನುಜನ |
ಕಾಲಿಗೆಱಗುತೆ ನಗುತ ಕುಳ್ಳಿರಿಸಿದನು ದಶಗಳನ ||೭೮||

ಕಾದಲಾಱದೆ ನಿನಗೆ ಬುದ್ಧಿಯ |
ನಾದರಿಸಿದವನಲ್ಲ ನೀತಿಯ |
ಗಾದೆವಾತನು ಹೇೞಿದೆನು ಮಾಣಹಿತವಾದೊಡದ ||
ಕಾದುವೆನು ನೀಮೆಚ್ಚೆ ನೀನೇ |
ನಾದೊಡಾನಂತಹೆನು ನಿನ್ನೊಳು |
ಭೇದವಿಹುದೇ ತನಗೆನುತ ಖಂಡೆಯವ ಝಳಪಿಸಿದ ||೭೯||

ಕೇಳು ದಶಶಿರ ಭಾಷೆಗಳನೀ |
ರೇೞುಲೋಕಕೆ ಬೆಱಗ ಬೀಱುವೆ |
ಗೋಳಿಡಿಸುವೆನು ದುಷ್ಟಸೇನಾನಿಕರವೆಲ್ಲವನು ||
ಪಾಳೆಯವ ತೆಗೆಸುವೆನು ಬಲುಬಿ |
ಲ್ಲಾಳುಗಳನಿಬ್ಬರನು ತಮದಲಿ |
ಚಾಳಿಸುವೆಸಿಂ ಸುಖದೊಳಿರುತಿರು ಹಗೆಗಳಿಲ್ಲೆಂದು ||೮೦||

ಮನದ ಚಿಂತೆಯ ಬಿಸುಡು ನಾಳಿನ |
ದಿನದ ರಾತ್ರಿಯೊಳೈದಿ ಬಲ್ಲಿದ |
ರೆನಿಪರಿಬ್ಬರನುಯ್ದು ಕಂಕಣದೇವಿಗರ್ಪಿಸುವೆ ||
ದನುಜಮನುಜಾಮರರೊಳಗೆ ತ |
ನ್ನನು ಧುರದೆ ಮಾಱಾಂಪರುಂಟೇ |
ದನುಜ ಹೇೞಿಂದೆನುತ ಬೀೞ್ಕೊಟ್ಟನು ದಶಾಸ್ಯನನು ||೮೧||

ದನುಜರಾಯನು ಒರುತ ಮೈರಾ |
ವಣನನೆಕ್ಕಟಿಗರೆದು ನುಡಿದನು |
ಅನುಜನೆಂದು ವಿಭೀಷಣನ ಸಲಹಿದಕೆ ಫಲವಾಯ್ತು ||

ಮುನಿದು ಕೊಡಲಿಯು ಕಾವು ವಂಶದ |
ವನವ ಕಡಿವಂತಾಯ್ತು ಮುನ್ನವೆ |
ಮನಕೆ ಬಂದೊಡೆ ಮೇಘವರ್ಣಗೆ ಹರಿವ ನೆನೆಯೆಂದ ||೮೨||

ಎಂದು ಬುದ್ಧಿಯ ಹೇಳಿ ದಶಶಿರ |
ನಂದು ಮೈರಾವಣನು ಕಳುಹಲು |
ಒಂದು ಮುನ್ನಿನ ಪಥವ ಹಿಡಿದಾರಾಜಮಂದಿರಕೆ ||
ಅಂದಿನಾವೃತ್ತಾಂತವನು ಸಾ |
ನಂದದಿಂ ಪತಿಗಱುಹೆ ದಿನಕರ |
ಬಂದನುದಯಾಚಲದ ಸುಂದರಸಿಂಹವಿಷ್ಟರಕೆ ||೮೩||

ಅರಳಿದುವು ಕಮಲಗಳು, ಮೋರೆಯು |
ಮುರುಹಿದುವು ಕುಮುದಗಳು, ತಾರಕೆ |
ತೆರಳಿದುವು ಗಗನದಲಿ ಹರೆದುವು ತಿಮಿರ ದೆಸೆದೆಸೆಗೆ ||
ಚರಿಸಿದುವು ಚಕ್ರಾಂಕವಗಲಕೆ |
ಹರಿಯೆ ರವಿಕಿರಣಗಳು ರಘುಪತಿ |
ಹರುಷದಲಿ ಮೊಗದೋಱೆ ನಿಜಭಕ್ತರಿಗೆ ಕರುಣದಲಿ ||೮೪||

ಅಂತು ಸಂಧಿ ೨ ಕ್ಕಂ ಪದ ೯೧ ಕ್ಕಂ ಮಂಗಳಂ

## ಮೂಱನೆಯ ಸಂಧಿ.

ಸೂಚನೆ|| ದೇವ ರಾಘವ ಲಕ್ಷ್ಮಣರ ಮೈ |
ರಾವಣನು ಕದ್ದೊಯೆ ವಿಭೀಷಣ |
ದೇವ ಸೂಚಿಸೆ ಪೋದನಾತನ ಪುರಿಗೆ ಕಲಿ ಹನುಮ ||

ತರುಣ ಕೇಳ್ಳೆ ಬಂದು ರಾವಣ |
ಹರುಷದಿಂದೋಲಗವನಿತ್ತನು |
ಕರೆಸಿದನು ಮೆಯ್ಯಾವಲಿನ ಬಹುದನುಜನಾಯಕರ ||

ಧುರಕೆ ವೀಳೆಯವಿತ್ತು ಸೇನೆಯ |
ಸರಿಗೆ ತಾಸೊತ್ತಾಗಿ ಬರೆ ದಿನ |
ಕರನು ಪಶ್ಚಿಮಗಿರಿಯ ಶಿಖರದ ನಿಳಯದೊಳವೊಕ್ಕ ||೧||

ಓಡಿದುದು ರವಿಕಿರಣವಗಲಕೆ |
ಝೂಾಡಿಸಿತು ಬಲುತಿಮಿರ ತಾರಕೆ |
ಮೂಡಿದುವು ಗಗನದಲಿ ವೊಗಗುಂದಿದುವು ಕಮಲಗಳು ||
ಜೋಡೊಡೆಯೆ ರವಿವಕ್ಕಿ ಖಗಕುಲ |
ಗೂಡ ಸಾರಲು ಚಂದ್ರಮನ ಗೆಱತಿ |
ಮೂಡೆ ನಕ್ಕುವು ಕುಮುದ ವಾರಿಧಿ ಹಿಗ್ಗೆ ಹರುಷದಲಿ ||೨||

ವಿಮಳಸಂಧ್ಯಾವಂದನೆಯ ಸು |
ಕ್ರಮದೊಳಾಚರಿಸಿದನು ರಾವಣ |
ನಮಿತಬಲನೋಲಗವನಿತ್ತನು ದನುಜಸಚಿವರಿಗೆ ||
ತಮತಮಗೆ ಖಳಭಟರು ದಿವಸದ |
ಸಮರವಾರ್ತೆಯ ವಿಸ್ತರಿಸುತಿರೆ |
ಕುಮತಿ ಹಾರೈಸಿದನು ಮೈರಾವಣನ ಬರವಿಂಗೆ ||೩||

ಅತ್ತ ಮೈರಾವಣನು ಮಿಗೆ ನಲಿ |
ಯುತ್ತ ಮಜ್ಜನಭೋಜನಂಗಳ |
ಬಿತ್ತರಿಸಿ ಮಣಿಮಯವಿಭೂಷಣದೊಟ್ಟು ನಲವಿನಲಿ ||
ರತ್ನಮಣಿಮುಕುಟಂಗಳ್ನೈದನು |
ಮತ್ತಕದೊಳಳವಡಿಸಿ ಬಿರುದಿನ |
ಚಿತ್ರಮಯಭೂಷಣಗಳಲಿ ಸಿಂಗರಿಸಿದನು ದನುಜ ||೪||

ಕರದೊಳಗೆ ಕಡುಗವನು ಜಡಿಯುತ |
ಭರವಶದೆ ಚಾವಡಿಗೆ ಬಂದನು |
ಹರುಷದಿಂದೋಲಗವನಿತ್ತನು ದನುಜರಾಯರಿಗೆ ||
ಕರೆಸಿ ಸೋದರದಳಿಯನನು ಕು |
ಳ್ಳಿರಿಸಿ ಕೊಂಡನು ಸಿಂಹಪೀಠದೆ |
ಕರಚರಣಲಕ್ಷಣಗಳನು ವೀಕ್ಷಿಸುತೆ ಚಿಂತಿಸಿದ ||೫||

ಹನ್ನೆರಡು ವರುಷಕ್ಕೆ ಪಟ್ಟವ |
ಸುನ್ನತದ ಭಾಳದೊಳು ತಳೆಯುವ |
ನಿನ್ನಿದುವೆ ರಾವಣನು ಹೇಳಿದ ಮಂತ್ರ ತಪ್ಪುವುದೇ ||
ಎನ್ನ ಕೊಂದಿವನೊಡೆಯನಹನೆಂ |
ದುನ್ನತರ ದಾನವರ ಕರೆಸಿದು |
ಹೊನ್ನ ಸಂಕಲೆಗಳನು ತೊಡಿಸುವುದೆಂದು ನೇಮಿಸಿದ ||೬||

ರಕ್ಕಸರು ಪಿಡಿದೊಯ್ದು ಮನೆಯೊಳ |
ಗಿಕ್ಕಿದರು ಸಂಕಲೆಯನತ್ತಲು |
ಮಕ್ಕಳಾಟಿಕೆಯಾದುದೆಂದರು ಪುರದ ಜನ ಮರುಗಿ ||
ಚಿಕ್ಕವರು ಮೊದಲಾಗಿ ಶೋಕದೊ |
ಳುಕ್ಕಿದರು ಜನ ಬಯ್ಯುತಿರಲಾ |
ಯಿಕ್ಕೆಲದ ದಾನವರ ಕಳುಹಿದ ಹರೆದುದೋಲಗವು ||೭||

ರಾವಣನು ತಾನೊಬ್ಬನೆಂದೇ |
ಭಾವದಲಿ ನಂಬಿಹನು ಚಿಂತೆಯ |
ತಾವಿದಾತಗೆ ತಕ್ಕ ಕಾರ್ಯಕ್ಕೊದಗ ಬೇಕೆನುತ ||
ಓವಿ ಶೃಂಗಾರವನು ಮಾಡಿದ |
ತೀವಿ ಫಣಿಯುಡುಗೆಯನು ಬಿಗಿದನು |
ತಾವರೆಯ ಸಖನಂತೆ ಹೊಳೆಯುತ ಕೈದುಗಳ ಕೊಂಡ ||೮||

ಬಂದು ಕಂಕಣದೇವಿಯಗ ಪದ |
ಕಂದು ನಮಿಸಿದು ಹಗೆಗಳನು ಹಿಡಿ |
ತಂದು ದಿಗುಬಲಿಗುಡುವೆ ನಿನಗೆಂದೆನುತೆ ಕೈವಿಡಿದು ||
ಹಿಂದೆ ಕಾವಲ ಬಲಿದು ಭರದಲಿ |
ಬಂದು ಲಂಕಾಪುರವ ಹೊಕ್ಕನು |
ಮುಂದುಗೆಟ್ಟಿಹ ರಾವಣನ ವೋಲಗಕೆ ನಡೆತಂದ ||೯||

ತೆಗೆದು ತಕ್ಕೈಸುತ್ತೆ ಮಣಿಗ |
ದ್ದುಗೆಯೊಳಗೆ ಕುಳ್ಳಿರಿಸಿದನು ಕುಶ |
ಲಗಳ ಬೆಸಗೊಂಡಸಮ ಮೈರಾವಣನ ಸತ್ಕರಿಸಿ ||

ಸೊಗಯಿಸುವ ವಸ್ತ್ರಾಭರಣಗಂ |
ಧಗಳನಿತ್ತುಪಚರಿಸಿ ಹೊಗಿಸಿದ |
ಜಗದ ಕಂಟಕ ರಾವಣನ ವೋಲಗವನೀಕ್ಷಿಸಿದ ||೧೦||

ಓಲಗವ ನೋಡಿದರೆ ಮಕುಟದ |
ಸಾಲ ಮನ್ನೆಯರಿಲ್ಲ ತನಯರ |
ಮೇಳವಡಗಿತು ಸುಭಟಮಂತ್ರಿನಿಕಾಯ ಬಯಲಾಯ್ತು ||
ಆಳ ಕಾಣೆನು ದನುಜ ಕೀಸಿದ |
ಕೋಲ ಕಡಿತದೊಳೊಬ್ಬನುಳಿದನೆ |
ಕಾಳುಮಾಡಿದನೆಂದು ಮೈರಾವಣನು ಬಿಸುಸುಯ್ದ ||೧೧||

ಎತ್ತ ನೋಡಿದೊಡತ್ತ ದನುಜರ |
ಕಿತ್ತ ಕಡುಗದ ಕಿರಣದಲಿ ರವಿ |
ತತ್ತಿಹನು ಬಲುಭಟರ ಖಂಡೆಯದೊಂದು ಬಲುಹಿನಲಿ ||
ಮಿತ್ತು ದೆಸೆಗಿಡುತಿಹಳು ರಾವಣ |
ನೆತ್ತ ಮೊಗದಿರುಹಿದೊಡೆ ದೇವರ |
ಮೊತ್ತ ಜೀಯೆಂದೆನಿಪ ಭಾಗ್ಯವು ಬಱತುದಕಟೆಂದ ||೧೨||

ಸುರರಿಗವಸರವಿಲ್ಲ ನರರಿಗೆ |
ದೊರಕದೀತನ ಸಮಯವಿವದಿರು |
ನೆರೆದು ಬಾಗಿಲ ಕಾದಿಹರು ದರುಶನವನೇ ಹಾರ್ದು ||
ಶರಣುಹೊಗದವರಿಲ್ಲ ದಶಕಂ |
ಧರನ ವೀರಭುಜಪ್ರತಾಪಕೆ |
ಸರಿದೊರೆಗಳಿಲ್ಲೆಂಬುದಡಗಿತೆ ಶಿವಶಿವಾಯೆಂದ ||೧೩||

ಮೃಡನು ಹರಸುವ ಬರಮನಕ್ಷತೆ |
ಗುಡುವ ಸುರಗುರು ದಿನವ ಹೇೞುವ |
ಕಡೆಯ ಬಾಗಿಲೊಳಿದ್ದು ಸೇವೆಯ ಮಾಡುವರು ಸುರರು ||
ಪೊಡವಿಯಣುಗೆಯ ಪಿಡಿದ ಕತದಿಂ |
ಮಡಮುರಿದರಿವರೆಲ್ಲ ದಶಶಿರ |
ಕೆಡುವನಕಟಕಟೆಂದು ಮೈರಾವಣನು ಬಿಸುಸುಯ್ದ ||೧೪||

ಬಳಿಕಲಾಮೈರಾವಣನು ಖಳ |
ತಿಳಕ ರಾವಣಗೆಂದನೀಗಳೆ |
ಯಿಳೆಯೊಡೆಯರಹ ರಾಮಲಕ್ಷ್ಮಣರುಗಳ ನೆರೆ ಕದ್ದು ||
ಇಱಿವೆನೆನ್ನಯ ಪುರಿಗೆ ದೇವಿಗೆ |
ಬಲಿಯನೊಪ್ಪಿಸಿ ಬಳಿಕ ಬಂದೀ |
ಒಲಿಮುಖರ ತಡೆಗಡಿವೆನೆಂದಮರಾರಿ ನಿಂದಿರ್ದ ||೧೫||

ನೇಮಿಸಿದ ಚತುರಂಗಸೇನೆಯು |
ನಾಮದಸುರರ ಕಳುಹಿದೊಡೆ ನಿ |
ಸ್ಸೀಮ ಮೈರಾವಣನು ಬಲ್ಲೆನೆನುತ್ತ ಕೈಮುಗಿದು ||
ತಾಮಸದ ಬಲುಕೈದುವಿರುತಿರೆ |
ರಾಮಲಕ್ಷ್ಮಣರೆಂಬರಿಬ್ಬರ |
ಭೂಮಿಯೊಳು ನಿರ್ನಾಮರೆನಿಸುವೆನೆಂದಿನಿರುಳಿನಲಿ ||೧೬||

ಮುದ್ರೆಯುಂಗುರ ಹೊಳೆಯೆ ನುಡಿದನು |
ಭದ್ರಮೈರಾವಣನು ಬೀಳ್ಕೊಂ |
ಡದ್ರಿಯಂದದೆ ನಡೆದು ಬಂದನು ಕಪಿಕಟಕದೆಡೆಗೆ ||
ನಿದ್ರೆಗಳನಾಲಿಸುತ ಮೆಲ್ಲನು |
ಪದ್ರ ಬಾಧೆಯ ಮಾಳ್ಪೆನೆನುತವೆ |
ರೌದ್ರರೂಪನೆ ತಾಳಬೇಕೆಂದೆನುತ ನಿಂದಿರ್ದ ||೧೭||

ಅಂದು ಮೈರಾವಣನು ಭಯವಹು |
ದೊಂದು ರೂಪನು ತಾಳಿ ತನ್ನಯ |
ಹಿಂದೆ ಮುಂದೆಡ ಬಲವನಾರೈಯುತ್ತ ನಡೆತಂದು ||
ನಿಂದು ಕಟಕವ ನೋಡಿ ಹಿಮಗಿರಿ |
ಯಂದದಲಿ ಬಳಸಿರ್ದ ಕೋಟೆಯ |
ಮುಂದೆ ಕಂಡತಿ ಚೋದ್ಯದಿಂ ಚಿಂತಿಸಿದ ಹೊಗುವೆಡೆಯ ||೧೮||

ರಕ್ಕಸರು ಬಹರೆಂದು ಬಾಲದೊ |
ಳಿಕ್ಕಿ ಹನುಮನು ಯಂತ್ರಕೋಟೆಯ |
ದಿಕ್ಕಟವನುಚ್ಚಳಿಸಿ ಬಳೆದುವು ವಜ್ರರೋಮಗಳು ||

ಕಿಕ್ಕಿಱಿದು ನುಸಿ ನುಸುಳಬಾರದು |
ರಕ್ಕಸರಿಗಳವಡದು ರಾಮನ |
ನೆಕ್ಕತುಳದಲಿ ನೆನೆಯುತಿರ್ದನು ವೀರ ಹನುಮಂತ ||೧೯||

ಬಂದು ಮೈರಾವಣನು ಕೋಟೆಯ |
ನಿಂದು ನೋಡಲು ಬಾಲವತಿ ಬಲು |
ಹಿಂದೆ ಬಳೆದುದು ನಭಕೆ ರವಿಶಶಿಮಂಡಲವ ತುಡುಕಿ ||
ನಂದಿವಾಹನನಂತೆ ಮೆಱೆದನು
ಚಂದ್ರ......ಮನಕೋಟೆಯೆನಿಸಿರೆ |
ಮಂದರದೊಲಿಹ ವೀರಹನುಮನ ಕಂಡು ಬೆಱಗಾದ ||೨೦||

ಲೋಕ ಮೂಱರೊಳೊಬ್ಬನೇ ತಾ |
ನೇಕಮಯಶಿವನೆಂದು ತಾನೇ |
ಯಾಕಪಟದಿಂದೊಲಿದು ಹನುಮನ ನಾಮವನು ಧರಿಸಿ ||
ಭೀಕರವ ತಾಳಿದನೊ ಭೂಮಿಯ |
ಕಾಕುದೈತ್ಯರ ಬಾಧೆಗೋಸುಗ |
ಲೋಕಕಂಟಕಶಿಕ್ಷಕನೊ ಇವನೆನುತ ಹೊಗಱಿದನು ||೨೧||

ಒಳಹೊಗುವೆ ನಾನೆಂತು ಕಟಕವ |
ಒಳಸಿ ನೋಡಿದೊಡೆಲ್ಲಿಯೆಲ್ಲಿಯು |
ನಿಲುಕಲಸದಳವಿದು ಹರಿಬ್ರಹ್ಮಾದಿದೇವರಿಗೆ ||
ಉಲುಕಬಾರದು ನುಸುಳುವೊಡೆ ಮೆ |
ಯ್ವಱಿಗೆ ಕಾಣೆನು ಪಥವನೆನುತಾ |
ಖಳನು ಚಿಂತಿಸಿ ನೋಡಿದನು ಪಾಳೆಯದ ಹೊಗವಣೆಯ||೨೨||

ಬಲುಮೆಯಿಂದಲಿ ಹೊಗುವ ಠಾವವು |
ಗಳಿಗೆ ನೂಕದು ಮಾಯೆಯಿಂದವೆ |
ಗೆಲಲು ಬೇಹುದು ಮಂತ್ರವಿದು ತಾನೆನುತ ನಿಶ್ಚಯಿಸಿ ||
ಖಳನು ತಾ ತಾಳಿದ ವಿಭೀಷಣ |
ನೊಲಿದು ತೊಟ್ಟಿಹ ರೂಪ ಧರಿಸಿಯೆ |
ಗೆಲುವೆನಿವದಿರನೆಂದು ನೆನೆದನು ತನ್ನ ಮನದೊಳಗೆ ||೨೩||

ಹೊಳೆವ ಮುಖ ತಳತಳಿಪ ಕಾಯದ |
ಯೆಳೆಯ ತುಲಸಿಯ ದಂಡೆ ದ್ವಾದಶ |
ಚೆಲುವ ನಾಮದ ಕಾಂತಿ ಕರುವಿಟ್ಟಿಱಕದಂದದಲಿ ||
ನಳಿನನಾಭನ ಶರಣರೂಪನು |
ತಳೆದು ನಿಶ್ಚಲಭಕ್ತನಂತಾ |
ಜಳರುಹಾಕ್ಷನ ನಾಮವನು ನೆನೆಯುತ್ತಲೈತಂದ ||೨೪||

ಕೇಳಿದನು ಹನುಮಂತನಾವನೊ |
ಪಾಳೆಯದ ಹೊಱವಳಯದೊಳು ಬಹ |
ಖೂಳನವನನು ಸೀಱಿಕ್ಕಿ ಬರಲೆಂದೆನುತ ಗರ್ಜಿಸಲು ||
ಮೇಲುವಾಯದ ಮುನ್ನ ನುಡಿದನು |
ಶ್ರೀಲತಾಂಗಿಯ ರಮಣ ರಘುಪತಿ |
ಯಾಳು ನಾನೆ ವಿಭೀಷಣನೆನುತ್ತೆಯ್ದಿ ಕೆಯ್ಮುಗಿದ ||೨೫||

ದಿಟ್ಟನಹ ಹನುಮಂತ ನುಡಿದನು |
ಸೃಷ್ಟಿಸುವ ಶ್ರೀರಾಮಚಂದ್ರನ |
ಬಿಟ್ಟು ಬಂದೀಪಾಳೆಯವ ಹೊಗಬಹುದೆ ನೀನೆನಲು ||
ನಟ್ಟಿರುಳು ರಕ್ಕಸರು ಮಾಯವ |
ಸೃಷ್ಟಿಸುತ ಕಗ್ಗೊಲೆಗೆ ಬಹರೆಂ |
ದಟ್ಟಿಸುತಲಿಹೆನೆಂದನಾಮಾಯಾವಿಗಳು ಬರಲು ||೨೬||

ಆವಿಗಡ ಮಾಯಾವಿಭೀಷಣ |
ತೀವಿ ರಚಿಸಿದ ಬಾಗಿಲನು ಸಂ |
ಭಾವಿಸುತಲೊಳವೊಕ್ಕು ಕಂಡನು ಬಹಳ ಪಾಳೆಯವ ||
ಆವ ಕಪಿಗಳೊ ಇವರೆನುತ ಮಿಗೆ |
ಭಾವದೊಳಗೀಕ್ಷಿಸುತ ಮನದೊಳ |
ಗಾವ ತೆಱದಿಂದಿವರ ಗೆಲಲಹುದೆಂದು ಚಿಂತಿಸಿದ ||೨೭||

ಉಗ್ರಸುಗ್ರೀವಾಂಗದಜಸುತ |
ನಿಗ್ರಹರ ನಳ ನೀಲ ಕೇಸರಿ |
ಯಗ್ನಿ ಶತಬಲಿ ಸುಮುಖ ದುರ್ಮುಖ ಕಲಿಸುಷೇಣಕನು ||

ಅಗ್ರಗಣ್ಯ ಗವಾಕ್ಷ ಗವಯ ಸ |
ಮಗ್ರದೆಪ್ಪತ್ತೇಳು ಕೋಟಿಯ |
ನಿಗ್ರಹದ ಕಪಿನಾಯಕರ ಪಾಳೆಯವನೀಕ್ಷಿಸಿದ ||೨೮||

ಸುರಗಿರಿಗಳೋ ಕಪಿಗಳೋ ಹಿಮ |
ಗಿರಿಗಳೋ ಮುಗಿಲುಗಳೋ ವಿನೀಲದ |
ಗಿರಿಗಳೋ ಕರಡಿಗಳೊ ನಿಷಧವೊ ಸಿಂಗಳೀಕಗಳೋ ||
ಧುರದೊಳಿವರನು ಜಯಿಸುವೊಡೆ ಶಂ |
ಕರಗೆ ತೀರದು ಮಿಕ್ಕ ದಾನವ |
ಸುರನರೋರಗರಿರವೆ ಮಝು ಭಾಪೆಂದು ಬೆರಗಾದ ||೨೯||

ಕರಡಿಗಳ ಕರಿಘಟೆಯ ಮುಸುಗಳ |
ತುರಗಗಳನುರುಸ್ಯಂದನಂಗಳ |
ಹಿರಿಯ ದೇಹದ ಸಿಂಗಳೀಕದ ನೆರೆದ ಕಾಲಾಳ ||
ಪರಿವಿಡಿಯ ವಲಿಮುಖರ ನೋಡುತ |
ನರಪ ರಾಮನ ಚಾತುರಂಗವ |
ಹಿರಿದು ಹೊಗಳುತ ಮುಂದೆ ಕಂಡನು ರಾಜಮಂದಿರವ||೩೦||

ಹೊಳೆವ ಕನಕದ ಕೋಟೆ ಬಾಗಿಲ |
ಪಲವು ನೆಲೆವಾಡಗಳ ಮುಂದೆ ಜ |
ವಳಿಗವಾಟದ ಬೀಯಗದ ಬಲುಲಾಳವಿಂಡಿಗೆಯ ||
ಪುಲಿಮುಖದ ಹರಿಯುಗವ ಸುತ್ತಲು |
ನಿಲಿಸಿ ಬಾಂಧವ ತಾಳಿಗಳ ಕಂ |
ಗೊಳಿಪ ರಾಜಾಲಯದ ಬಲ್ಮೆರು ನೋಡಿ ಬೆರಗಾದ ||೩೧||

ದನುಜನಾಸಮ್ಮೋಹನಾಸ್ತ್ರದ |
ಘನದ ಮಾಯಾಪಾಶದಿಂದವೆ |
ವನಚರರ ಸೇನೆಯಲಿ ಬೀಸಿದನೇನ ಹೇಳುವೆನು ||
ವನಜಲೋಚನ ರಾಮಲಕ್ಷ್ಮಣ |
ರಿನತನಯ ಮುಂತಾದ ಕಪಿಗಳು |
ಕನಸುಗಳ ಕಾಣುತ್ತ ನಿದ್ರಾವಸ್ಥೆಗೆಯ್ದಿದರು ||೩೨||

ಬಾಲವನು ತಲೆಗಿಂಬನೆಸಗುತೆ |
ನೀಲಗಿರಿ ಪವಡಿಸಿದ ತೆಱದಲಿ |
ಕಾಲುಕೈಗಳ ಮಡಿಸಿಯೊತ್ತೋಳುಗಳನಳವಡಿಸಿ ||
ಆಲಿಗಳ ನೆರೆ ಮುಚ್ಚಿ ಶ್ವಾಸದ |
ಹೊಯ್ಲಿನಲಿ ಗುರುಗುರಿಸುತೊರೆಯುತ |
ತಾಳಿ ನಿದ್ದೆಯೊಳಿಪ್ಪ ಕಟಕವ ಕಂಡು ಬೆಱಗಾದ ||೩೩||

ನೆಗೆದು ವಿದ್ಯಾಧರರ ಗತಿಯಲಿ |
ಜಗದೊಡೆಯನರಮನೆಯ ಹೊಕ್ಕನು |
ಆಗಣಿತದ ಮಣಿಮಯದ ಶಯ್ಯಾನಿಲಯದೆಡೆಗೈದಿ ||
ಹೊಗಱಿ ಕಾಣವು ನಿಗವ ತತಿ ಯೋ |
ಗಿಗಳು ಬಯಸುವ ದಿವ್ಯಮೂರ್ತಿಯ |
ಹೊಗರುವೋರೆಯ ದನುಜ ಕಂಡನು ಮಣಿಯ ಮಂಚದಲಿ ||

ಸುತ್ತುವಳಯದ ಸಕಲ ಕಪಿಗಳು |
ಮತ್ತರಾಗಿರಲವರ ಕಾಣುತ |
ಲುತ್ತಮದ ಪರಿಪೂರ್ಣಚಂದ್ರಮರಂತೆ ತೊಳತೊಳಗಿ ||
ಇತ್ತ ಮಲಗಿಹ ರಾಮಲಕ್ಷ್ಮಣ |
ರತ್ತ ಚಿತ್ತವನಿತ್ತು ದನುಜನು |
ಹತ್ತಿರದೆ ನೋಡಿದನು ಬೆಱಗಾದನು ಮಹೀಶ್ವರರ ||೩೪||

ಲೋಕವನು ಕುಕ್ಷಿಯೊಳು ಧರಿಸುವ |
ಲೋಕವೆಲ್ಲವನೊಲಿದು ರಕ್ಷಿಪ |
ಲೋಕಕೋಟಿಯ ರೋಮರೋಮಂಗಳೊಳಗಿಂಬಡುವ ||
ಲೋಕಕರ್ತೃವೆನಿಪ್ಪ ಮೂರುತಿ |
ಲೋಕನಾಥನನಂತರೂಪನ |
ನೇಕಗುಣಮಣಿ ರಾಮ ಲಕ್ಷ್ಮಣರುಗಳನೀಕ್ಷಿಸಿದ ||೩೫||

ದನುಜನಳುಕುತ ಮುಗುಳೆ ಹಿಗ್ಗುತ |
ಮನದೊಳಗೆ ಶಂಕಿಸುತ ನಲಿಯುತ |
ಅನುಚಿತವಿದೆಂದೆಂದವಜ್ಞತೆಗಳನು ಕಲ್ಪಿಸುತ ||

ಮನೆಗೆ ಮಾರಿಯು ಕೊಂಡು ಪೋಪವೊ |
ಲಿನಶಶಿಯ ಮಂಡಲಕೆ ಕವಿತಹ |
ಬಿನುಗು ರಾಹುವಿನಂತೆ ತುಡುಕಿದ ಮಂಚಸಹ ನೃಪಗ ||೩೭||

ಮಂದಮತಿ ಖಳ ನೃಪರ ಮಾಯಾ |
ಬಂಧದಲಿ ಪಿಡಿದಾವಿಭೀಷಣ |
ನಂದದಲಿ ನಡೆತಂದು ಹನುಮಗೆ ನುಡಿದು ದುಗುಡದಲಿ ||
ಇಂದು ಮಾಯಾಕಾರ್ಯಗಳು ಬಹು |
ದೆಂದು ಸೂಚಿಸುತದೆ ವಿಚಾರಿಸಿ |
ಬಂದಪೆನು ಬಿಡು ಪಥವನೆನೆ ಪೊೞಮುಡಿಸಿದನು ಖಳನ ||೩೮||

ಮುಱಿದುವಿದಿರಲಿ ಹೆಮ್ಮರಂಗಳು |
ಸುರಿದುವಗಲದೊಳರುಣಜಲ ಬೊ |
ಬ್ಬಿಱಿಯೆ ಧರೆ ತುೞುಗಿದುವು ನಭದಲಿ ಧೂಮಕೇತುಗಳು ||
ಒರಲಿದುವು ಬಳ್ಳುಗಳು ಬಱಸಿಡಿ |
ಲೆಱಗಿದುವು ಕಟ್ಟಿದಿರಿನಲಿ ಮೆ |
ಯ್ಮಱೆದು ಮೈರಾವಣನು ನಡೆದನು ನಿಮಿಷಗತಿಗಳಲಿ ||೩೯||

ದಿಟ್ಟನಹ ಮೈರಾವಣನು ತಾ |
ನಿಟ್ಟಣಿಸಿ ಪಾತಾಳಕಿೞಿದನು |
ಧಟ್ಟಿಸುವೆನೀಗಿವರನೆನುತಲಿ ತನ್ನ ಪಟ್ಟಣಕೆ ||
ಅಟ್ಟಿ ಜೇಗದಿ ಬಂದು ಹೊಕ್ಕನು |
ಮುಟ್ಟಿ ಪುರಜನಮಱಿಯದೊಲು ಜಗ |
ಜಟ್ಟಿಗಳನಿೞುಹಿದನು ಕಂಕಣದೇವಿಯಿದಿರಿನಲಿ ||೪೦||

ಸಂಕಲೆಯನಳವಡಿಸಿಯಗಳಿಯ |
ಭುಂಕರಿಸಿದನು ಒೞಿಕಲೀನಿ |
ಶ್ಯಂಕರ ಹರಿರ್ವರನು ದೇವಿಗೆ ಬಲಿಗುಡುವೆನೆನುತ ||
ಕಂಕಣಾದೇವಿಯುರ ತನುವನ |
ಲಂಕರಿಸಿದನು ಕಾರ ತೆಱದಲಿ |
ಕೊಂಕಿಪರ ಖಳ ದೇವತೆಯನಾರಾಧಿಸುತಲಿರ್ದ ||೪೧||

ಅತ್ತಲು ವಿಭೀಷಣನು ಯೆಚ್ಚತ್ತು |
ವೆತ್ತು ನೋಡೆ ಭಯಂಕರವಿದೆನೆ |
ಸುತ್ತ ಮೆಯ್ಮತಿದೊಱಗಿಕೊಂಡಿಹ ಕಪಿಗಳನು ಕಂಡು ||
ಒತ್ತಿ ಹೊಯ್ದೆಬ್ಬಿಸಲು ಕೇಳದೆ |
ಮತ್ತರಾಗಿಹ ಪ್ಲವಗಸೇನೆಯ |
ನೊತ್ತವನು ಕಂಡಿದು ವಿಗುರ್ವಣೆಯೆಂದು ಬೆಱಗಾದ ||೪೨||

ಪಸರಿಸಿತು ಕಟಕದಲಿ ತಾಮಸ |
ಮುಸುಕಿದಂದದಿ ಮಲಗಿಹರು ರ |
ಕ್ಕಸರ ಮಾಯಾಪಾಶವಲ್ಲದೊಡಿನಿತು ಕ್ರಮವುಂಟೆ ||
ಬಸವಳಿದು ನಾಲ್ದೆಸೆಯ ನೋಡುತ |
ಲಸಮಕಪಿಗಳು ನಿದ್ದೆಯೋಳಗಿರೆ |
ವಸುಮತೀಶನ ನೋಱಬ್ಬೆನೆಂದನು ರಾಮರಾಮೆನುತ ||೪೩||

ರಾಮರಾಮೆಂದೊರಲಿ ಬೀಱುತ |
ರಾಮರೆಲ್ಲಿಗೆ ಪೋದರಕಟಾ |
ಹಾ ! ಮಹಾಪೇನೆಂದು ಮೊಱೆಯಿಡಲಾವಿಭೀಷಣನು ||
ಕಾಮಪಿತ ಮೆಯ್ದೋಱು ಭಕ್ತ |
ಪ್ರೇಮಿ ಕರುಣಿಸು ದೇವಮಂಗಳ |
ನಾಮ ನೀ ಕೃಪೆಮಾಡೆನುತ ಬಲಿಮುಖರನೆಬ್ಬಿಸಿದ ||೪೪||

ರಾಮಮಂತ್ರಸ್ಮರಣೆಯಿಂದಲೆ |
ರಾಮಕಟಕವನೆಬ್ಬಿಸಿದ ತ |
ನ್ನಾಮದಿಂದವೆ ಘನತೆಯೆಂದೆನಲಾವಿಭೀಷಣನು ||
ರಾಮನನು ಕೊಂಡಾಡಿ ಪುನರಪಿ |
ರಾಮನನು ನೆನೆಯುತ್ತ ದುಃಖಿಸಿ |
ಭೂಮಿಪತಿ ಲಕ್ಷ್ಮಣರ ಕಾಣೆನೆನುತ್ತ ಕಟಕದಲಿ ||೪೫||

ಬಂದೊಡಾಸುಗ್ರೀವ ಹನುಮರು |
ಬಂದು ಕಾಣದೆಯಿರಲು ನಾನಾ |
ಮಂದಿ ಘೋಳೆಂದೊರಲಿ ಬಿದ್ದರು ಶೋಕವಹ್ನಿಯಲಿ ||

ಅಂದಱುತ ಕಂಬನಿಯ ಧಾರೆಗ |
ಳಿಂದ ನನೆದರು ದುಃಖದಿಂದಲೆ |
ಕುಂದಿ ಶೋಕಾಂಬುಧಿಯೊಳೋಲಾಡಿದುದು ಕಪಿಕಟಕ ||೪೬||

ಹಾಯೆನುತ ಜಾಂಬವರು ಮಱುಗಿದು |
ಬಾಯ ಬಿಡುತಿರೆ ಯೋಚನೆಗೆ ಮನ |
ಹಾಯಿತೆನುತಾವಾಯುಜನ ಮೊಗನೋಡಿ ಮೆಯ್ಮಱೆದ ||
ಸಾಯಲೆಸಗಿದ ನೀಲ ನೊಂದನು |
ಪುಯ್ಯಲಿಲ್ಲದೆ ನಡುವಿನಿರುಳಲಿ |
ಮಾಯವಾದರೊ ತಾವೆನುತ್ತೊರಲಿದುದು ಕಪಿಕಟಕ ||೪೭||

ನಿನ್ನ ಪಾದವ ಕರುಣದಿಂದಲಿ |
ಯೆನ್ನ ಶಿರದೊಳಗಿರಿಸಿ ಹರುಷದೊ |
ಳುನ್ನತದ ಕೋಮಲದ ಹಸ್ತಗಳಿಂದ ಮೆಯ್ದಡವಿ ||
ಮನ್ನಣೆಗಳಿಂ ಕರೆದು ಮೋಹದೊ |
ಳೆನ್ನ ನೀ ಸ್ವೀಕರಿಸೆ ಕೆಯ್ವಿಡಿ |
ದೆನ್ನ ಪಾಲಿಸದಿರುವುದೊಳ್ಳಿತೆ ದೇವ ಹೇೞೆಂದ ||೪೮||

ಮುನ್ನ ಮಾಡಿದ ತಪದ ಫಲದಲಿ |
ನಿನ್ನ ಕಿಂಕರರಾದೆವೆಮ್ಮನು |
ಮನ್ನಿಸದೆ ನೀನೆಲ್ಲಿ ತೆರಳಿದೆ ದೇವ ಹೇೞೆನುತ ||
ಇನ್ನೆನಗೆ ಗತಿಯಾವುದೈ ಸಂ |
ಪನ್ನ ರಾಘವ ಎನುತ ಹಲುಬುತ |
ತನ್ನ ಹರಣವನುೞಿವುದನು ನಿಶ್ಚೈಸಿದನು ಹನುಮ ||೪೯||

ದುಕ್ಕವನು ಪರಿಹರಿಸಿ ಹನುಮನ |
ತಕ್ಕಯಿಸಿದನು ಹಿರಿಯ ಜಾಂಬವ |
ಹೊಕ್ಕುಹೊರೞಾಡುವರ ಸುಳುಹನು ನಿಲಿಸಿ ಬೆಸಗೊಂಡ ||
ಅಕ್ಕಜವನೇನೆಂಬೆನಾಂ ನಿಶಿ |
ಯೊಕ್ಕಲಿಡೆ ಕಾವಲಿನೊಳಿರ್ದೆನು |
ಮಕ್ಕಳೞಿತಘೊಳ್ಳಾಡ್ದೆನೆಂದಾಹನುಮ ಹೇೞಿದನು ||೫೦||

ದಾನವರ ಭಯ ಬಲುಹದೆಂದಾಂ, |
ಮಾನನಿಧಿ ನಮ್ಮಾ ವಿಭೀಷಣ |
ತಾನೆ ತಿರುಗುತ್ತಿರಲು, ಕೇಳಿದೆನೆಂದು ವಿನಯದಲಿ ||
ನೀನು ರಾಮನ ನೆನೆಯುತಿದ್ದಡೆ |
ದಾನವರ ಭಯವುಂಟೆ ಹೋಗೆಂ |
ದೆನ್ನ ಕಳುಹಲು ಬಂದು ಹೊಕ್ಕೆನು ನಮ್ಮ ಪಾಳೆಯವ ||೫೧||

ಮನದೆ ಯೋಚನೆಯೂಱಿದುದು ಬಲು |
ಘನತರದ ಕತ್ತಲೆಯೊಳಗೆ ಮನು |
ಮುನಿಗಳೊಡೆಯನ ಕಾಂಬ ತವಕದೆ ಬಂದೆ ಪಾಳೆಯಕೆ ||
ವನಜಲೋಚನ ರಾಮಚಂದ್ರನ |
ನನುಜ ಲಕ್ಷ್ಮಣವೆರಸಿ ಕಾಣದೆ |
ವನಚರರನೆಬ್ಬಿಸಿಯೆ ನಿಮಗಱುಹಿದೆನು ತಾನೆಂದ ||೫೨||

ಈಹದನನೆಲ್ಲವನು ತಿಳಿಯುತೆ |
ಗಾಹಿನಿಂದವೆ ನಮ್ಮ ಕಟಕದ |
ಬಾಹೆಯೊಳು ಹೊಱವಟ್ಟು ತಿರುಗಿದುದಿಲ್ಲ ತಾನೆಸಲು ||
ಆಹದನನೂಹಿಸಲು ಕೇಳ್ದಡೆ |
ಬೇಹಿಗನು ತಾ ಶರಣುಹೊಕ್ಕನು |
ಸಾಹಸಿಗನಿವನೆನಲು ದಿಟವೆಂದರು ಬಲೀಮುಖರು ||೫೩||

ಕೊಂದು ಕೆಳೆವೆವು ನಿನ್ನನೀಗಳೆ |
ಮಂದರೋದ್ಧರ ರಘುವರನ ತೋ |
ಱೆಂದು ಕಪಿಗಳು ಹಿಡಿದರಂದು ವಿಭೀಷಣನ ಸೆಱಗ ||
ಚೆಂದದಲಿ ರಘುರಾಮರನು ತೊರೆ |
ವಂದವನು ನಿಮ್ಮಾ ವಿಭೀಷಣ |
ನಂದದಲಿ ಮಾಡಿಸಿದ ಕಾರ್ಯವು ಹನುಮ ಕೇಳೆಂದ ||೫೪||

ಎನೆ ವಿಭೀಷಣನಱಿದು ನುಡಿದನು |
ದನುಜ ಮೈರಾವಣನು ಪೂರ್ವದೊ |
ಳನುಸರಿಸಿದನು ತನ್ನ ರೂಪವನೊಲಿದು ಬೇಡಿದಡೆ ||

ಮನವೊಲಿದು ತಾನಿತ್ತೆನಾತಗೆ |
ದನುಜನೆನ್ನಯ ರೂಹಿನಲಿ ಬಂ |
ದಿನಕುಲೋತ್ತಮರಬ್ಬರನು ಕದ್ದೊಯ್ದನವನೆಂದ ||೫೫||

ಎಂದೆನಲು ಕಪಿಕಟಕ ನೀನತಿ |
ಬಂಧುರದೆ ನುಡಿದಿದುವೆ ಸಮ್ಮತ |
ವೆಂದು ಕೆಡೆನುಡಿದುತ್ತರವ ಸೈರಿಸಲು ಬೇಕೆನುತೆ ||
ಎಂದೊಡೆಂದ ವಿಭೀಷಣನು ತಾ |
ನಿಂದು ಬಲ್ಲೆನೆ ಯಿಾಖಳನು ನೆರೆ |
ಬಂದ ಮಾಯೆಯನಱಿಯೆ ನಾನೆನಲೆಂದನಾಹನುಮ ||೫೬||

ಆದಿಪುರುಷನೆನುಯ್ದ ದನುಜನ |
ಭೇದಿಸುವೆನೀರೇೞು ಲೋಕದೊ |
ಳಾದರಿಸಿ ಹೊಕ್ಕಲ್ಲಿ ಹೊಗುವೆನು ವೈರಿದಾನವನ ||
ಕಾದಿ ನೊಸಲಕ್ಕರವ ತೊಡೆವೆನು |
ಹಾದಿದೋೞುವೆ ಯಮನ ನಗರಿಗೆ |
ಯಾದನುಜಸತಿಯರನು ದುಃಖದೊಳಿಂದು ಮುೞುಗಿಸುವೆ ||

ಮೆಚ್ಚಿದನು ಮನದೊಳು ವಿಭೀಷಣ, |
ದುಶ್ಚರಿತನಿದ್ದೆಡೆಯ ವಿವರಿಸೆ |
ಬೆಚ್ಚುವರು ನಾನೇನ ಹೇೞುವೆ ಕೇಳಲದ್ಭುತವ ||
ನಿಚ್ಚಟದ ರೂಹಿಂದೆ ಹೊಗೆ ಬಲು |
ನೊಚ್ಚಿತವು ಹೊಗಬಾರದೆನಲತಿ |
ಜರ್ಜೆಯಿಂದಿರುತಿಹುದು ಘನಪಾತಾಳದೊಳು ಲಂಕೆ ||೫೮||

ಇಳೆಯೊಳತಿ ಚೆಲ್ವಿಕೆಗೆ ಯಿಾಪುರ |
ನೆಲೆಯೆನಿಸಿ ಮಯನಿರ್ಮಿತದ ಬಲು |
ಬಲುಮೆಯಲಿ ಖಳಜನ್ಮದೆಡೆಯೆಂದೆಸಿಸಿ ಮೆಱೆದಿಹುದು ||
ವಿಲಸಿತದಲಂಕಾರರಚನೆಯ |
ಬೆಳಗಿ ತೋಱುತೆ ಮುದ್ಗರವನೊಳ |
ಕೊಳುತಲುಱೆ ಪಾತಾಳಲಂಕೆಯೆನಿಪ್ಪ ನಾಮದಲಿ ||೫೯||

ಸುತ್ತ ಬಳಸಿದ ದುರ್ಗ ಕೋಟೆಯು ।
ವಿಸ್ತರದ ನೆಲೆಗಾಣದಗಳಿನು ।
ಕಿತ್ತ ಬತ್ತೀಸಾಯುಧದ ಶತಕೋಟಿ ರಾಕ್ಷಸರು ॥
ಮುತ್ತಿಕೊಂಡಿಹರೆಂಟುದೆಸೆಯಲಿ ।
ಯೊತ್ತಿಬಂದಡೆ ವೈರಿಜನಗಳ ।
ಕತ್ತ ಕೊಯ್ದಾಡಾಡುವರು ಬಲುಭಟರು ಕೇಳೆಂದ ॥೬೦॥

ಆಹೊಳಿಲ ಮಧ್ಯದೊಳಗಿರ್ಪುದು ।
ಕಾಹಿನಿಂದರ್ಚಿಸಿದ ಮಂಟಪ, ।
ದೋಹರಿಯೊಳೆಸೆದಿರ್ಪಳಾಮಣಿಮಯದ ಕಾಂತಿಯಲಿ ॥
ಬೋಹರಿಸಿ ನೆರೆ ಹೊಳೆವ ಭವನದಿ ।
ಬಾಹುಗಳ ಜಡಿಯುತ್ತೆ ನೋಡಲು ।
ನೇಹದಿಂ ನೆಲಸಿಹಳು ನಿಜದಿಂ ಕಂಕಣಾದೇವಿ ॥೬೧॥

ಹರನಿಗಿಂ ಬಲ್ಲಿದನು ಬಲದಲಿ ।
ಸಿರಿಪತಿಗೆ ಬಲ್ಲಿದನು ಸಿರಿಯಲಿ
ಸರಸಿಜಾಸನನಿಂದೆ ಬಲ್ಲಿದ ಸಕಲವಿದ್ಯೆಯಲಿ ॥
ಸ್ಮರನಿಗಿಂ ಬಲ್ಲಿದನು ರೂಪದಿ ।
ಸುರಪನಿಂ ಬಲ್ಲಿದನು ಭೋಗದಿ ।
ಧರೆಯೊಳಗೆ ಮೈರಾವಣನಿಗೆಣೆಯಿಲ್ಲ ಹೊಗಳುವೊಡೆ ॥೬೨॥

ಶಿವನ ನಗರಿಗೆ ದಾಳಿಯಿಡುವಾ ।
ಜವನ ದಂಡವ ತುಡುಕಿ ಸೆಳೆಯುವ ।
ಧ್ರುವನ ಮಂಡಲಕುರವಣಿಸಿಯಾತನನು ಭಂಗಿಸುವ ॥
ತವಕದಲಿ ವಡಬನನು ಪಿಡಿಯುವ ।
ಭುವನವೇಳನು ಮುರುಟಿನುಂಗುವ ।
ಅವಗಡೆಯ ರಾಕ್ಷಸರ ನಾಯಕರಿಹರು ಶತಕೋಟಿ ॥೬೩॥

ಒಬ್ಬರೊಬ್ಬರ ಗುಣಿಸುತಿನವರಲಿ ।
ಕೊಬ್ಬಿದಗ್ಗದ ವೀರ ವೀರರ ।
ನಬ್ಬರಿಪ ಕರಿತುರಗರಥಕೋಟಿಗಳ ಲೆಕ್ಕದಲಿ ॥

ಉಬ್ಬಿರುವ ವೀರರನು ಹೊಗಱಿಲು ।
ಗಬ್ಬರಿಪ ಕೂರುಮಗೆ ತೀರದು ।
ಹುಬ್ಬುಗೆಯದಸುರಪ್ರತಾಪವು ಹನುಮ ಕೇಳೆಂದ ॥೬೪॥

ಅಲ್ಲಿಗುಯ್ದು ನಿಶಾಚರನು ಭೂ ।
ವಲ್ಲಭರನಿಬ್ಬರನು ಮಾಯದಿ ।
ಕೊಲ್ಲುವಲೆಯಲಿ ಕೊಂದನೋ ಮೇಣುಱುಹಿದನೊ ನೃಪರ ॥
ಬಲ್ಲಿದರಿಗಸದಳವು ಹೊಗುವೊಡೆ ।
ಸುಳ್ಳುಯೆನದಿರು ನಿನಗಗಾಧವೆ ।
ಫುಲ್ಲನಾಭನ ಕೃಪೆಯೊಳಿಂತಿದು ಸಾಧ್ಯವಹುದೆಂದ ॥೬೫॥

ಲಂಕೆಯಾನಡುಗಡೆಯೊಳೆಸೆವುದ ।
ಲಂಕರಣಶೋಭಿತದ ಕೊಳನೊಳು ।
ಪಂಕಜವು ಬೆಳೆದಿಹುದು ಪಾತಾಳದೊಳು ಬೇರೂಱಿ ॥
ಶಂಕೆಯಿಲ್ಲದೆ ಹೇಮಕಮಲದಿ ।
ಪಂಕಜಾಕ್ಷನ ನೆನೆಯುತಿಱಿಯಲು ।
ಮುಂಕೊಳಿಪ ಹೊಳೆಹೊಳೆಯುತಿರ್ಪುದು ಲಂಕೆಪಾತಾಳ॥೬೬॥

ರಾಮನಾಮವ ಮಱೆಯದಿರು ನಿ ।
ಸ್ಸೀಮರಲ್ಲಿಗೆ ಹೋಗಿ ಸೀನಾ ।
ಕಾಮಪಿತ ಲಕ್ಷ್ಮಣರ ವಾರ್ತೆಯ ಹೊಱಗೆ ನೀ ತಿಳಿದು ॥
ಸಾಮಭೇದದೆ ಹೊಕ್ಕು ನಗರದ ।
ನಾಮದಸುರರ ಗೆಲಿದು ಚಿಹ್ನದಿ ।
ಭೂಮಿಪತಿಗಳ ತರಲು ಬೇಕೆಂದನು ವಿಭೀಷಣನು ॥೬೭॥

ಆವಿಭೀಷಣ ಕಳುಹೆ ತತ್ಕ್ಷಣ ।
ತೀವಿ ರಾಗದಿ ಹನುಮನಾಸು ।
ಗ್ರೀವ ಮೊದಲಾದಖಿಳ ಕಪಿನಾಯಕರ ಬೀಱಿಕ್ಕೊಂಡು ॥
ದೇವರಾಮನ ನೆನೆದು ಲಂಕೆಯ ।
ಕಾವಲವರಿರುತಿರಲು ಕೋಟೆಯ ।
ಭಾವಿಸದೆಯೊಳವೊಕ್ಕು ಕಂಡನು ತಾವರೆಯ ಕೊಳನ ॥೬೮॥

ವರರತುನಸೋಪಾನದಿಂದಲಿ |
ಮೆಱೆವ ಸರಸಿಯ ಕಮಲದಿಂ ಮಧು |
ಕರನು ಚಿಗಿದುದು ನೋಡೆ ಹನುಮಗೆ ದಾರಿದೋರ್ಪಂತೆ ||
ಮೆಱೆವ ಚಿಲಿಬಿಮಿನಿಚಯದಿಂದಾ |
ತರಳಖಗಸಂತಾನದುಲುಹಿಂ |
ಸರಸಿ ಮೆಱೆದಿರೆ ಕಂಡನಗ್ಗದ ವೀರ ಹನುಮಂತ ||೧೯||

ಹಾಱಿದುವು ಹಂಸೆಗಳು ಲತೆಗಳ |
ನೇಱಿದುವು ಚಕ್ರಾಂಕ ಶಿರಗಳ |
ನೂಱಿ ಮುೞುಗುತ ತಡಿಗೆ ಸಾರ್ದುವು ಹಂಸಪಕ್ಷಿಗಳು ||
ಚೀಱಿದುದು ಕೊಳರ್ವಕ್ಕಿ ಮರಗಳ |
ನೇಱಿಕೊಂಡುವು ಗೂಗೆ ಶುಕಪಿಕ |
ಬೀಱಿದುದು ಪರಿಮಳವ ಮಾರುತ ತನಯನಿದಿರಿನಲಿ ||೨೦||

ಕಂಡನಾಕೊಳದೊಳಗೆ ಹೇಮದ |
ಪುಂಡರೀಕವನಡರಿ ಹೊಕ್ಕನು |
ಗಂಡುಗಲಿ ಹನುಮಂತನಿೞಿದನನೇಕಯೋಜನವ ||
ಪುಂಡರೀಕಾಕ್ಷನನು ನೆನೆಯುತೆ |
ಕಂಡನಾಕೆಳಗಿದ್ದ ಸರಸಿಯ |
ದಂಡೆಯೊಳು ಬರೆ ಮತ್ಸ್ಯಕಪಿ ಪೊಱಮಡುವ ಸಮಯದಲಿ ||

ಉಬ್ಬರಿಸಿ ಒಹ ಸರಸಿಮಧ್ಯದೊ |
ಳಬ್ಬರಿಸಿ ಬರೆ ಮತ್ಸ್ಯವಾನರ |
ಗಬ್ಬವೊಡೆದುದು ಬಡಬನಳುಕಿದ ಕಮಠ ತಲ್ಲಣಿಸೆ ||
ಗರ್ಭ ಬರಿದುದು ಮೞಿಲ ಶರನಿಧಿ |
ತಬ್ಬಿದಳು ವಾಸುಕಿಯ ಯೋಗಿಣಿ |
ಬೊಬ್ಬಿಡುತೆ ನಡೆತಂದನಲ್ಲಿಗೆ ಮತ್ಸ್ಯಕಪಿರಾಯ ||೨೧||

ವಾರಿಜದ ನಾಳದೊಳು ಧೀರರ |
ದಾರು ಬಂದವರೆನುತೆ ಹನುಮನ |
ನಾರುಬಟೆಯಲಿ ತೂಗಿ ನುಂಗಿದ ಮತ್ಸ್ಯವಾನರನು ||

ತೋರಗಿರಿಯಂದದಲಿ ಬಳೆದನು |
ವೀರನುದರದೆ ಹಸುಮನಾಜಲ |
ಚಾರಕಪಿ ಗಿಟಗಿರಿಯೆ ಮುರಿದುವು ವಜ್ರಲೋಮಗಳು ||೭೩||

ಸಿಕ್ಕಿದನು ಹನುಮಂತ ಕುಟಿಯೊಳು |
ಸಿಕ್ಕಿದಾನೆಯು ತೆಱದೆ ಮೆಯ್ಯನು |
ತೆಕ್ಕಿ ಕೊಳಲಳವಲ್ಲ ಮುರಿದುವು ದೇಹದಸ್ಥಿಗಳು ||
ಉಕ್ಕಿದುದು ಮೇಲುಸಿರು ಕಂತದ |
ಬಿಕ್ಕಳಿನ ಭೀತಿಯಲಿ ತನ್ನೊಂ |
ದಕ್ಕಱಿನ ಮನದೊಳಗೆ ರಾಮನ ನೆನೆದನಾಹನುಮು ||೭೪||

ತಾನು ಬಳೆದಡೆ ಧರಣಿವಳಯುದ |
ಮಾನಿಸರಲ್ಲ ಗಿರಿಗಳೊಡೆವುವು |
ಭಾನುಮಂಡಲವದುರುವುದು ಬ್ರಹ್ಮಾಂಡ ನುಗ್ಗಹುದು ||
ಆನಲರಿಯುವು ದಿಗ್ಗಜಂಗಳು |
ಮಾನನಿಧಿಯಿವನಾರೆನುತೆ ಪವ |
ಮಾನಸುತ ಚಿಂತಿಸುತಲುಱೆ ಬೆಱಗಾದನಡಿಗಡಿಗೆ ||೭೫||

ಇವನುದರದೊಳು ನಾನು ಸಿಕ್ಕಿದೆ |
ರವಿಕುಲರನಿನ್ನುಯ್ವರಾರೋ |
ತವಕದಿಂ ಕಪಿಕಟಕ ದಾರಿಯ ನೋಡುತಿಹರಲ್ಲಿ ||
ಕವಿಸಿ ಗೆಲಲಾಱದು ಚತುರ್ದಶ |
ಭುವನದೊಳಗತಿ ವೀರನಿವ ರಾ |
ಘವನೆ ಬಲ್ಲನೆನುತ್ತೆ ಚಿಂತಿಸುತಿರ್ದನಡಿಗಡಿಗೆ ||೭೬||

ಹೊಟ್ಟೆಯೊಳು ಸಿಕ್ಕಿರ್ದು ಬೆದಱದೆ |
ಮುಟ್ಟಿ ಕಲಿ ಹನುಮಂತ ನುಡಿದನು |
ದಿಟ್ಟನಹೆ ಮೂಜಗಕೆ ಬಲ್ಲಿದ ನೀನದಾರೆನಲು ||
ದಿಟ್ಟ ದಶರಥತನುಜನಹ ಜಗ |
ಜಟ್ಟಿರಾಮನ ಸೇವೆಗೊರಗುವ |
ಪಟ್ಟದಾನೆಯೆನಿಪ್ಪ ಹನುಮನ ಮಗನು ತಾನೆಂದ ||೭೭||

ಎನಲು ನಕ್ಕನು ವೀರಹನುಮನು |
ಮನದೊಳಗೆ ಸಲೆ ಚಿಂತೆದಾಳಿದ |
ಹನುಮ ತಾ ದಿಟವಹೆನೊ ಪಲ್ಲಟವಾದೆನೋ ಮೇಣು ||
ಮುನವಚನದೊಳು ಸತಿಯರೆನಗಂ |
ಜನೆಯ ಸಮವೀಧೂರ್ತ ತನ್ನಲಿ |
ಜನಿಸಿದಂದವಿದೆಂತೆನುತೆ ನುಡಿಸಿದನು ನಂದನನ ||೭೮||

ನೀನು ಹನುಮನ ತನಯನೆಂತೈ |
ಮಾನಿನಿಯರಾತಂಗೆ ತಾಯ್ಗಳು |
ನೀನು ಜನಿಸಿದ ಪರಿಯ ವಿಸ್ತರವಾಗಿ ಹೇಳೆನಲು ||
ತಾನು ಜನನಿಯ ನೇಮದಿಂದಲಿ |
ಭಾನುಮಂಡಲಕುರವಣಿಸಲಾ |
ವಾನರನ ತನುಬೆವರಿ ಸುರಿದುದು ಕಡಲ ಮಧ್ಯದಲಿ ||೭೯||

ಅದನು ತಿಮಿಯಾದರಿಸಿ ನುಂಗಿದು |
ದದಱುದರದೊಳು ಗರ್ಭ ಬಳೆದುದು |
ಉದಧಿಯೊಳು ಬೆಸಲಾಗಲಾದಿನಕರನ ತೇಜದಲಿ ||
ವದನ ಮತ್ಸ್ಯಾಕಾರ ದೇಹವು |
ವಿದಿತ ವನಚರರೂಪಿನಿಂದಲಿ |
ಮುದದಿ ಜನಿಸಿದೆ ಮತ್ಸ್ಯವಾನರನೆಂದು ಹೆಸರೆನಗೆ ||೮೦||

ಇನ್ನು ನೀನಾರೆಂಬುದನು ಸಂ |
ಪನ್ನ ಹೇಳೆನೆ ಮನದಿ ನಾಚುತೆ |
ತನ್ನ ತನಯನ ಕೂಡೆ ನುಡಿದನು ಹನುಮ ವಿನಯದಲಿ ||
ನಿನ್ನ ಸಾಹಸವೆನ್ನ ತನುವನು |
ಬನ್ನಬಡಿಸಿದುದೆನಲು ಶೌರ್ಯೋ |
ತ್ಪನ್ನನೀನಹುದೆಂದು ಭಯಭಕ್ತಿಯಲಿ ಬೆಸಗೊಂಡ ||೮೧||

ಮೆಚ್ಚಿದನು ಮನದೊಳಗೆ ಪವನಜ |
ನುತ್ಸವದೊಳಂದಾಕುಮಾರಗೆ |
ಶಿಕ್ಷೆಯವ ಕೇಳಿನ್ನು ಕಲಿ ಹನುಮಂತ ತಾನೆನಲು ||

ಬೆಚ್ಚಿ ಬೆದಱುತ ಗಜಕರಣದಿಂ ।
ಮುಚ್ಚಿದುದರದಿ ನಿನ್ನ ಬಾಧಿಸಿ ।
ಹೆಚ್ಚಿ ನೋಯಿಪ ಸುತನ ಮೂರ್ಖತೆಗೆಣಿಸದೆಯೆ ದಯದಿ ॥

ದೇವದೇವನ ರೂಪ ಜಯಜಯ ।
ದೇವ ಸಾಹಸಮಲ್ಲ ಜಯಜಯ ।
ದೇವ ದೈತ್ಯಮನೋಭಯಂಕರ ದೇವ ಜಯಜಯತು ॥
ದೇವ ಶಿವಮಯಮೂರ್ತಿ ಜಯಜಯ ।
ದೇವ ರಾಮನ ಭಕ್ತ ಜಯಜಯ ।
ದೇವ ಜಯಜಯಯೆನುತ ಹೊಗೞಿದ ಪಿತನ ಪದಯುಗವ ॥

ಎತ್ತಿದನು ನಸುನಗುತ ತನಯನ ।
ಮತ್ತೆ ತಕ್ಕವಿಸಿದನು ಮೋಹದೊ ।
ಳುತ್ತಮದ ಸಾಹಸಿಕೆಯುೞಿದರಿಗುಂಟೆ ಲೇಸೆನಲು ॥
ಇತ್ತ ಬಿಜಯಂಗೆಯ್ದಿರೇಕೆನೆ ।
ಮತ್ತೆ ನುಡಿದನು ಮರುತನಂದನ ।
ನೊತ್ತಿದಗ್ಗದ ರಾಜಕಾರ್ಯದ ಹದನ ತನಗಾದ ॥೮೪॥

ದೇವಿಯರ ಖಳನುಯ್ದು ಕತದಿಂ ।
ದೇವ ರಾಘವಲಕ್ಷ್ಮಣರ ಮೈ ।
ರಾವಣನು ತಾ ಕೊಂಡು ಬಂದ ಮಹಾತಲದ ಪುರಿಗೆ ॥
ಆವಿಭೀಷಣ ಪೇೞಿದಡೆ ತಾ ।
ತಾವರೆಯ ನಾಳದಲಿ ಬಂದೆನು ।
ದೇವರಾಮನನುಯ್ದು ಖಳವಂಶವನು ಬೞಿಕೆಯ್ವೆ ॥೮೫॥

ನಿಮ್ಮ ನಾ ನುಂಗಿದೆನು ತನ್ನನು ।
ಹಮ್ಮಿನಿಂ ಪಿಡಿದೊಡನೆ ನುಂಗುವ ।
ಬೊಮ್ಮರಕ್ಕಸರಲ್ಲಿ ನೆರೆದಿದೆ ಕೋಟಿಸಂಖ್ಯೆಯಲಿ ॥
ಬೊಮ್ಮನಯ್ಯನ ಕರುಣದಲಿ ನಿಮ ।
ಗೊಮ್ಮೆ ಜಯವಹುದೆಂದು ಬಟ್ಟೆಯ ।
ಸಮ್ಮತದಿ ಕುಡೆ ರಾಗದಲಿ ಬರುತಿರ್ದನಾಹನುಮ ॥೮೬॥

ತನಯುನನು ಬೀಳ್ಕೊಂಡು ಕ್ರೀಡಾ |
ವನಕೆ ಬಂದನು ದನುಜಪುರದೊಳು |
ಜನವಱಿಯದವೊಲೆಯ್ದ ಬೇಕೆನುತಂದು ಸೂಕ್ಷ್ಮದಲಿ ||
ಮನದಿ ತೊರವೆಯ ಹರಿಯ ನೆನೆಯುತ |
ಹನುಮನಿದ್ದನು ಹರುಷದಲಿ ಸ |
ಜ್ಜನರುಗಳ ನೆರೆ ಪೊರೆವ ರಘುವರ ಶರಣುಶರಣೆನುತ ||೮೭||
ಅಂತು ಸಂಧಿ ಮೂಱಕ್ಕಂ ಪದ ೧೮೪ಕ್ಕಂ ಮಂಗಳಂ.

## ನಾಲ್ಕನೆಯ ಸಂಧಿ

ಸೂಚನೆ || ಸೀಳಿ ಮೈರಾವಣನ ರಣದಲಿ |
ನೀಲಮೇಘಗೆ ಪಟ್ಟಗಟ್ಟಿ ನೃ |
ಪಾಲರನು ಪಾಳಿಯಕೆ ತಂದನು ವೀರಹನುಮಂತ ||

ಆವ ಪೀರನೊ ಕುಶನ, ಹನುಮನು |
ತೀವಿದುದ್ಯಾನದೊಳಗೈತರೆ |
ಪಾವಪೋನ್ನತಶಕುನಗಳ ಕಾಣುತ್ತಲಿದಿರಿನಲಿ ||
ದೇವರಾಮನ ಕಾಂಚೆನೆನುತವೆ |
ಭಾವದಲಿ ಗುಡಿಗಟ್ಟಿ ನಲಿಯುತೆ |
ಪಾವನದ ಕಿಱುಗಪಿಯು ವೇಷವ ಧರಿಸಿ ನಡೆತಂದ ||೧||
ಬರುತ ಕಂಡನು ದೂರದಲಿ ದಿನ |
ಕರನ ಕಾಂತಿಯು ಹಱಿವ ತೇಜದೆ |
ಮೆಱೆವ ನಗರಿಯ ನೋಡುತುಱೆ ಬೆಱಗಾಗಿ ನಿಂದಿರಲು ||
ಸರಸಿರುಹನಯುಸಂಗಳಿಂದಲೆ |
ಸುರಿವ ವಾರಿಸಮೇತದಿಂದಲೆ |
ಅರಿಯ ಪಟ್ಟಣದಿಂದ ಬಹ ದೋರ್ದಂಡಿಯನು ಕಂಡ ||೨||
ಅಡಸಿದಾಪತ್ತಿನಲಿ ಭಯುವನು |
ಬಿಡಿಸಿ ನುಡಿನುವರೊಬ್ಬರಿಲ್ಲದೆ |
ಕೊಡವೆರಸಿ ನಡೆತಂದಳಾನಿರ್ಮಲಸರೋವರಕೆ ||

ಕಡುಗಲಿ ಹನೂಮಂತ ಸರಸಿಯ |
ತಡಿಯೊಳಸುರೆಯ ಕಂಡು ವಿನಯದಿ |
ನುಡಿಸಿದನು ರಾಮನ ಸುವಾರ್ತೆಯನಱಿವ ತವಕದಲಿ ||೩||

ತಾಯೆ ನಿಮಗೀದುಗುಡವೇಕೆನು |
ತಾಯತದಿ ಬೆಸಗೊಂಡನಾಕೆಯ, |
ಬಾಯ ಬಿಡುತುಱಿ ಹೇಱಿದಳು ದುಃಖಗಳ ದುಸ್ಸ್ಥಿತಿಯ ||
ರಾಯರಿಬ್ಬರ ತಂದು ರಕ್ಕಸ |
ನಾಯಿಯೆನ್ನ ಕುಮಾರಸಹಿತವು |
ಪಾಯದಲಿ ಮೂವರನು ಕೊಲುವನೆನುತ್ತೆ ಮಱುಗಿದಳು ||೪||

ಆಕುಮಾರಕನೆನ್ನ ಸುತ ಲೋ |
ಕೈಕವೀರನು ವೈಷ್ಣವಪ್ರಿಯ |
ಕಾಕುತನದಲಿ ಕೊಲುವನೆಂದಳು ಹಗೆಗಳೊಡಗೂಡಿ ||
ಏಕೆ ದುಃಖವೊ ಶಿಶುವಿನಲಿ ಜನ |
ಲೋಕವಿಂತಿದ ನೋಡಲಮ್ಮದು |
ಶೋಕರೂಪವು ಕೇಳು ಕಪಿವರಯೆಂದಳಾದನುಜೆ ||೫||

ಕಂಕಣಾದೇವಾಲಯದೆ ನಿ |
ಶ್ಯಂಕರಹ ಮೂವರನು ಮಲಗಿಸಿ |
ಶಂಕೆಯಿಲ್ಲದೆ ಮಂತ್ರದಿಂ ದೇವತೆಯನರ್ಚಿಸುತ ||
ಪಂಕಜವ ನೀ ಹೋಗಿ ಬೇಗದಿ |
ಶಂಕಿಸದೆ ಭರದಲಿ ತಹುದೆನೆ |
ಭೋಂಕನೆಯ್ದಿದೆನೆಂದು ನುಡಿದಳು ಹನುಮಗಾದನುಜೆ ||೬||

ಕೇಳಿದನು ಹನುಮಂತ ಲಕ್ಷ್ಮೀ |
ಲೋಲಲಕ್ಷ್ಮಣರುಗಳ ಕುಶಲವ |
ತಾಳಿದನು ಹರುಷವನು, ನೊಂದನು ಬಂಧನಸ್ಥಿತಿಗೆ ||
ಹೇಱಿದೆಯಲಾ ಒಸಗೆಯನು ನೀ |
ತಾಳದಿರು ಮನದೊಳಗೆ ಚಿಂತೆಯ |
ಕೇಳು ಭಾಷೆಯನೆನುತ ನುಡಿದನು ಹನುಮನಂಗನೆಗೆ ||೭||

ಕೊಲುವೆ ಮೈರಾವಣನ ಬಲವನು, |
ನೆಲದೊಳೊಱಸುವೆ, ನಿನ್ನ ತನಯಂ |
ಗೊಲಿದು ಪಟ್ಟವ ಕಟ್ಟಿ ತನ್ನೊಡೆಯರನು ಕೊಂಡುಯ್ವೆ ||
ಲಲನೆ ನೋಡೆಂದೆನಲು ಮಾನಿನಿ |
ಮೆಲುನಗೆಯೊಳಣಕಿಸುತ ನುಡಿದಳು |
ಕೊಲುವರಿದ ಕೇಳಿದರೆ ದನುಜರು ಹೋಗು ಹೋಗೆನಲು ||೮||

ನೊರಜಿನೆಱಕೆಯ ಗಾಯದಲಿ ಕುಲ |
ಗಿರಿಗಳೋಡುವುವೇ, ದಿನೇಶನ |
ಕಿಱುಸೊಡರು ನುಂಗುವುದೆ, ಶರಧಿಯನಿಱುವೆ ದಾಂಟುವುದೇ||
ತರುಚರನೆ ಮೈರಾವಣನ ನೀ |
ನೊಱಸಿ ನಿಲಿಸುವೆ ನೀಲಮೇಘನ |
ಹರುಸವಾಯಿತು ತನಗೆನುತ ಗಹಗಹಿಸಿದಳು ದನುಜೆ ||೯||

ಎಣಿಸನವ ಶಂಕರನ, ಶಕ್ರನ |
ನೆಣಿಕೆಮಾಡನು, ಹರಿಯ ಮತ್ತೇ |
ನಣಕಿಸುವನವನಜಮುಖಾಖಿಲಲೋಕಪಾಲಕರ ||
ಒಣಗರೆಂಬನು ಮನುಜರನು ನೀ |
ತೃಣವವಗೆ ಹುಲುಕಪಿಯೆ ಹೋಗೆನೆ |
ವನಿತೆಯಂಜದಿರೆನುತ ನಿಜವನು ತೋಱಿದನು ಹನುಮ ||೧೦||

ಒಡನೆ ಬಳೆದನು ಹನುಮ ಕಲ್ಪದ |
ಕಡೆಯ ರುದ್ರನೊ ಬಲಿಯ ಬಂಧಿಸಿ |
ಪೊಡವಿಯಳೆದ ತ್ರಿವಿಕ್ರಮನೊ ಅದ್ವೈತಮಾರುತಿಯೋ ||
ನಡುಗಿದಳು ದೋರ್ದಂಡಿ ಕಂಗಳ |
ನಿಡಿಕಿಱಿದು ಭಯದಿಂದ ಪವನಜ |
ನಡಿಗೆಱಗೆ ಹನುಮಂತ ಮುನ್ನಿನ ರೂಹ ಕೈಕೊಂಡ ||೧೧||

ಮಂಗಳಾತ್ಮಕರಾರು ಪೇಳ್ ಕಪಿ |
ಪುಂಗವನು ನೀನಾರೆನಲು ದನು |
ಜಾಂಗನೆಗೆ ವಿವರಿಸಿದನಾಖಳೆ ಕೇಳ್ದು ಪದಕೆಱಗಿ ||

ತುಂಗವಿಕ್ರಮ ಕೇಳು ದನುಜರು |
ಸಂಗರಕೆ ಬಹರೆಂದು ಖಳಪತಿ |
ಯಂಗನೆಯರನು ತೂಗಿ ಬಿಡುವನು ಪುರದ ಬಾಗಿಲಲಿ ||೧೨||

ತೂಗಿ ಬಿಡುವರು ಮೊದಲು ಪುನರಪಿ |
ತೂಗಿದರೆ ಘನವಾಗಲವರನು |
ಬೇಗದಲಿ ಕಡಿಖಂಡವನು ಮಾಡುವರು ನಿಮಿಷದಲಿ ||
ನಾಗಭೂಷಣಗರಿದು ಹೊಗುವೊಡೆ |
ನಾಗರಿಂಗರಿದೆನಲು ನಿಜ್ಜವು |
ಬಾಗಿಲೊಳು ಕಾದಿಹರು ಬಹುಶತಕೋಟಿದಾನವರು ||೧೩||

ತೂಗಿ ಬಿಡುವರನೊಱಸಿ ಕೊಲುವೆನು |
ಬೇಗದಲಿ ಮೈರಾವಣನ ಹಿರಿ |
ದಾಗಿ ನೊಸಲಕ್ಕರವ ತೊಡೆವೆನು ಸೇಸೆಸಹಿತೆನಲು ||
ರಾಗದಿಂ ದೋರ್ದಂಡಿ ನುಡಿದಳು |
ಬಾಗಿಲನು ಕಳೆದೈದಿ ಬರೆ ಹೊ |
ಕ್ಕಾಗ ತೋಱಿಸು ದನುಜವೀರಗೆ ಭುಜಪರಾಕ್ರಮವ ||೧೪||

ಕುಂಭದೊಳು ಮಱೆಮಾಡಿ ನಿನ್ನವ |
ಲಂಬಿಸುತ ಕೊಂಡುಯ್ವೆನೆನಲಾ |
ಅಂಬುಜಾಕ್ಷಿಯ ಕೊಡನೊಳಗೆ ಕಪಿ ಪುಗಲು ಸೂಕ್ಷ್ಮದಲಿ ||
ಸಿಂಬಿಯೊಳು ನೆರೆ ಧರಿಸಿ ನಡೆಯಲು |
ತುಂಬಿ ಪರಿಮಳಕೆಱಗುವಂದದಿ |
ಡಂಭದನುಜರು ನಿಲಿಸಿದರು ಬಾಗಿಲಲಿ ಬಾಲಕಿಯ ||೧೫||

ಕೊಡವೆರಸಿ ತೂಗಿದರು ಬಾಲೆಯ |
ಗಡಣದಿಂ ಹನುಮಂತ ಬಳೆದುಱೆ |
ಕೊಡನೊಡೆದು ಕೊಲೆ ಮುರಿದು ಬಿದ್ದರು ದನುಜಕೋಟಿಗಳು ||
ಮಡಮುರಿದು ಮೊಣಕಾಲ ಕೀಲ್ಗಳು |
ಪುಡಿವಡೆದು ಕೈಮುರಿದು ಕಾಲುಗ |
ಳುಡಿದು ಮಸ್ತಕ ಪಿಡಿದು ಕೆಡೆದುದು ಕೋಟಿ ಖಳನಿಕರ ||೧೬||

ಬಿದ್ದು ತಾ ಕೊಲಲತ್ತ ದಾನವ |
ರೆದ್ದು ಮುತ್ತಿತು ಕೋಟಿ ಸಂಖ್ಯೆಯೊ |
ಳದ್ದರಿಸಿ ಕೋಡಗವ ಕಡಿ ಕವಿಯೆನುತಲುಱವಣಿಸೆ ||
ಒದ್ದು ಕೆಡಹಿದನಿಕ್ಕೆಲದವರ |
ಗುದ್ದಿ ಬಿಸುಟನು ಮುಂದೆ ಕವಿವರ |
ಮದ್ದರೆವ ತೆಱದಿಂದೆ ಬಾಲದೊಳರೆದನಾಹನುಮ ||೧೭||

ಬಲುಹು ಕೋಡಗಕೆಂದೆನುತ ಖಳ |
ರುಲಿದು ಮುತ್ತಿತು ವೀರಹನುಮನ |
ನೊಲಿದು ಬತ್ತೀಸಾಯುಧಂಗಳೊಳೆಸುತೆ ಬರಬರಲು ||
ಸೆಳೆದು ಕೈದುಗಳೆಲ್ಲವನು ಕಪಿ |
ಮುಳಿಸಿನಲಿ ಕೆಲಕೆಲರನರೆದನು |
ಖಳರ ವದನವ ಸೀಳ್ದು ಬಿಸುಟನು ಕೋಟಿಸಂಖ್ಯೆಯಲಿ ||೧೮||

ಕಾಳೆಗವ ಕಂಡಖಿಳರಾಕ್ಷಸ |
ರಾಳು ಕವಿದುದು ಕರಿ ತುರಗ ಕಾ |
ಲಾಳು ರಥ ಮುತ್ತಿತು ಚತುರ್ಬಲವಂದು ಲಗ್ಗೆಯಲಿ ||
ಕೇಳುವಡೆ ನಿಸ್ಸಾಳ ಚಮ್ಮಟಿ |
ಕಾಳೆ ಹೆಗ್ಗಾಳೆಗಳು ತಂಬಟ |
ಗೀಳಿಡಲು ಬಹುವಾದ್ಯರಭಸವಜಾಂಡವೊಡೆವಂತೆ ||೧೯||

ಹರಿಗಳನು ಮುಱಿವಿಡಿದು ರಕ್ಕಸ |
ರುಱವಣಿಸಿ ಕವಿತರಲು ಕಪಿವರ |
ಮೊರೆದು ಕಿಱಿಕಿಱಿಗುಟ್ಟಿ ಹಣುಗುತ ಶಿರವ ತಪ್ಪಿಸುತ ||
ಭರದಿ ಭೀತಿಯ ನಟಿಸಿಕೊಳ್ಳುತ |
ಲರಿನಿಶಾಚರಸೇನೆಯನು ಕಪಿ |
ಹಿರಿದು ಬಾಲದಿ ಸೇದಿ ಬಿಗಿದಪ್ಪಳಿಸಿದನು ಧರೆಗೆ ||೨೦||

ನೂಕಿದುವು ಕುದುರೆಗಳು ಮೋಹಿಸಿ |
ನಾಕುದೆಸೆಯಲಿ ಕವಿದು ಬರೆ ಬರೆ |
ಜೋಕೆಯಲ್ಲಿ ಮುಸುಂಡಿ ಮುದ್ಗರ ಭಿಂಡಿವಾಳದಲಿ ||

ತೋಕಿ ರಾಮನ ಶರಣನನಿಲನ |
ನೇಕ ಕೈದುವ ಮುರಿದು ಬಿಸುಟನು |
ಶಾಖೆ ಹೆಮ್ಮರಗಳನು ತಿರುಹುತ್ತಿತ್ತ ಮುಂದಾಡ ||೨೧||

ಹೊಡೆದೊಡಜಿಗಿಜಿಯಾಗಿ ರಾವುತ |
ರೊಡಲು ತುಱಗದ ದೇಹ ಮದ್ದಾ |
ವೊಡಗಲಿಸಿದುದು ಬಹು ಮಹಾದ್ಭುತವಾಯ್ತು ರಣಭೂಮಿ ||
ಕಡಲುವರಿದುದು ಹರಿವ ರಕುತದ |
ಮಡುವಿನೊಳು ನೆಲೆಗಾಣಬಾರದು |
ಮಡಿದುವಾಹಯ ಜೋದರುಗಳಾನೆಗಳ ಸೂಂಕಿದರು ||೨೨||

ಜೋದರಿಸುವತಿಚಿತ್ರಗತಿಗಳ |
ಭೇದಿಸುತ ಕಂಗಳಲಿ ನೋಡಲು |
ನಾದಿದರು ಪವಮಾನತನಯನ ಸರಳ ಸೋನೆಯಲಿ ||
ಭೂಧರದೆ ಬೆಱಗಾಗಿ ಶರದಂ |
ಭೋಧಿಯಲಿ ಮುೞುಗಾಡಿ ನೋಡುತ |
ಮೂದಲಿಸುತೆಯ್ದಿದರು ಹರಿಯಂದದಲಿ ಕರಿಘಟೆಯ ||೨೩||

ಕರಿಯ ದಂತವನುಗಿದು ಕೆಡಹುತ |
ಭರದಿ ಬರಿಕೈಗಳನು ಕಡಿಯುತ |
ಕೊರಲ ಬಾಲದಿ ಬಿಗಿದು ಜೋದರಸಿರವ ಮುರಿದೆಸುತ ||
ನೆರೆದ ಕಾಲಾಳುಗಳು ಕವಿಯಲು |
ಧುರದೊಳಗೆ ಹೆಣಮಯವ ಮಾಡುತ |
ತಿರುಗಿ ಬೊಬ್ಬಿಱಿದಾಱಿ ನಿಂದನು ವೀರಹನುಮಂತ ||೨೪||

ತೇರುಗಳು ನೂಕಿದುವು ಧುರದೊಳು |
ವೀರಹನುಮನ ಮೇಲೆ ಬೊಬ್ಬಿಱಿ |
ದಾಱಿ ಬಾಣಾವಳಿಯ ಸುರಿದರದೇನ ಹೇೞುವೆನು ||
ತೋಱುತಿಹ ವರವಜ್ರದೇಹದೆ |
ಮೇರೆಯಿಲ್ಲದೊಲಂಬು ಬಿದ್ದುಱಿ |
ಹಾಱಿದುವು ಕಿಡಿಸಿಡಿದು ರವಿಕಿರಣಗಳ ತೆಱನಂತೆ ||೨೫||

ಹಿರಿದು ಬೆಳೆದಿಹ ವನದಿ ಮಿಡುಕುವ |
ಹರಿ ಹರಿದು ಸುಡುವಂತೆ ಗಥಗಳಿ |
ಗುರವಣಿಸಿದನು ಪದದೆ ಚಿಗಿಚಿಗಿದಾಱ ಬೊಬ್ಬಿಱದು ||
ಕರಚರಣವನು ಬಾಲದಲಿ ಪಿಡಿ |
ದೊಱಸಿ ಕೆಡಹಲು ಚಾತುರಂಗವು |
ಮುರಿಯೆ ಬಲ ಪಡಿತಳಿಸಿ ಮುತ್ತಿತು ಮತ್ತೆ ಪವನಜನ ||೨೬||

ಒಂದು ದೆಸೆಯಲಿ ತೇರುಗಳು ಮ |
ತ್ತೊಂದು ದೆಸೆಯಲಿ ಕರಿಯ ಘಟೆಗಳು |
ಮುಂದೆ ನೂಂಕಿದುವೇನ ಹೇೞುವೆ ಬಹಳ ಕುದುರೆಗಳು ||
ಹಿಂದೆ ಕವಿದೈದುವ ನಿಶಾಚರ |
ವೃಂದ ಮುತ್ತಿತು ವೀರ ಹನುಮನ |
ಸಂದಣಿಸಿ ಮೆತ್ತಿದರು ಬತ್ತೀಸಾಯುಧಂಗಳಲಿ ||೨೭||

ಇಟ್ಟನಾನೆಯನಾನೆಯಿಂದಲೆ |
ಯಟ್ಟಿ ಕುದುರೆಯ ಕಾಲ ಕಟ್ಟುತ |
ಮೆಟ್ಟಿ ಮುರಿದನು ತೇರುಗಳ ಕಾಲಾಳ ಸಂದಣಿಯ ||
ಘಟ್ಟಿಸಿದನೊಂದೇ ಕ್ಷಣದೆ ಜಗ |
ಜಟ್ಟಿ ದಾನವರಾಯರನು ಹುಡಿ |
ಗುಟ್ಟಿದನು ಹೇಡಿಗಳು ತೆಗೆದೋಡಿದರು ಹಿನ್ನೆಲೆಗೆ ||೨೮||

ಬಾಯ ಬಿಡುತೋಡಿದರು ರಕ್ಕಸ |
ರಾಯರಿವರನು ಬಲಿಗುಡುವೆನೆಂ |
ದಾಯುಧವ ಒಡಿದೆತ್ತಿ ಹೊಡೆದಪೆನೆಂಬ ಸಮಯದಲಿ ||
ಜೇಯ ಚಿತ್ತೈಸೊಂದು ಕೋಡಗ |
ವಾಯದಲಿ ನಡೆತಂದು ಕೋಪಿನ |
ನಾಯಕರ ಕದನದಲಿ ಕೆಡಹಿತು ಸಕಲಬಲಸಹಿತ ||೨೯||

ಕೇಳಿದನು ಖಳರಾಯನೆತ್ತಿದ |
ಬಾಳನಿಳುಹಿದನೆನ್ನ ನಗರಿಗೆ |
ದಾೞಯುಂಟೇ ಹರಿಹರಬ್ರಹ್ಮಾದಿಗಳಿಗಳವೇ ||

ಹೇಱುಹೇಱಿನೆ ಜೀಯ ಕೋಡಗ |
ನಾಳುತನಕಿದಿರಿಲ್ಲ ರಣದೊಳು |
ಸೀಱಿ ಬಿಸುಟುದು ಕಾವಲಿನ ನವಕೋಟಿದಾನವರ ||೩೦||

ಬೀಱಿ ಹೊಯ್ದಾಕಪಿಯುನವರೊಡ |
ನಾಳುಗಳ ನಾಲ್ವರನು ದೇವಿಗೆ |
ಸೀಱಿ ದಿಗುಬಲಿಗುಡವೆನೆಂದೆನುತಧಿಕರೋಷದಲಿ ||
ಭಾಳಲೋಚನ ನೋಡಲೀಗಳೆ |
ತೋಳ ಬಲುಹನು ತೋಱಿಸುವನೆನೆ |
ಕಾಳರಾಕ್ಷಸ ಗರ್ಜಿಸುತ ಬರಹೇಱಿ ಹೊಱವಂಟ ||೩೧||

ಕದನಭೇರಿಗಳುಲಿಯೆ ಕೂರುಮ |
ಹದುಗಿದನು ಫಣಿರಾಯ ಹೆಡೆಗಳ |
ಬಿದಿರಿದನು ಕರಿಯೆಂಟು ಡೆಂಘಣಿಸಿದುವು ಮೇಲೆಸೆವ ||
ಬೆದರಿದುವು ಹದಿನಾಲ್ಕು ಲೋಕಗ |
ಳದುಭುತವ ಕೇಳಿದನು ಕಪಿ ಪಡೆ |
ಮುದದಿ ನಲಿದಾಡಿದುವು ತಮತಮಗಧಿಕಹರ್ಷದಲಿ ||೩೨||

ನೆರೆದುದಾಕ್ಷಣ ಕರಿಘಟಾವಳಿ |
ಯೆರಡುಕೋಟಿ ತುರಂಗವರ್ಬುದ |
ಹರಿವ ರಥ ಶತಕೋಟಿ ವಿಂಶತಿಪದ್ಮ ಕಾಲಾಳು ||
ಮೊರೆವ ಬಲುನಿಸ್ಸಾಳ ತಂಬಟ |
ಮುರಜ ಭೇರಿ ಮೃದಂಗ ಡಿಂಡಿಮ |
ಬಿರುದಿನಗ್ಗದ ಕಾಳೆ ಸೂಳೈಸಿದುವು ದೆಸೆದೆಸೆಗೆ ||೩೩||

ಮೋದದಲಿ ಶಿರಕಳವಡಿಸಿ ಮಣಿ |
ಯೈದನನುಪಮಮಕುಟಗಳನೀ |
ರೈದು ಕರದಲಿ ಕೋಟಿಕಂಕಣಮುದ್ರೆ ಪೂರಯುದ ||
ಐದು ಕೊರಳಲಿ ರವಿಯ ಕಿರಣವ |
ದೈದೆ ಜರಿವಾಭರಣ ರಿಪುಗಳ |
ಬೈದ ಕಡೆಯುವ ಧರಿಸಿ ಪರಿಮಳತಿಗುರನುರೆಗೆಲಿದ ||೩೪||

ಎತ್ತಿದರು ಸೊಡರುಗಳ ಸತಿಯರು |
ಮುತ್ತುಗಳ ಸೇಸೆಯನು ತಳಿದರು |
ಹೊತ್ತ ಭುಜದಶಕದಲಿ ಬಲುಗೈಯೆನಿಪ ಕೈದುಗಳ ||
ಸತ್ತಿಗೆಯ ಸಾಲುಗಳ ಸುಭಟರ |
ಕತ್ತಿ ಬಲು ಹೊಳೆಹೊಳೆಯೆ ಬಡುಗದ |
ಮೊತ್ತ ಮೆಱೆಯಲು ನಡೆದ ಕೈವಾರಿಗಳ ಗಡಣದಲಿ ||೩೫||
ಕಂಕಣಾದೇವಿಯರ ಶ್ರೀಪದ |
ಪಂಕಜಕೆ ಪೊಡೆವಟ್ಟು ಖಳ ನಿ |
ಶ್ಶಂಕ ತುರಗಕೆ ನಮಿಸಿ ಬಳವಂದಡರಿದನು ರಥವ ||
ಕಂಕಣವ ತಿರುಹುತ್ತಲೆಡಬಲ |
ವಂಕದಸುರರ ನೋಡಿ ಕದನಭ |
ಯಂಕರನು ಕರವಾಳ ನೊಸಲಿಗೆ ಚಾಚಿ ಜೀಯೆನಲು ||೩೬||
ಆಹವಕ್ಕನುವಾಗವನ ಮೆ |
ಯ್ಯಾಹಿನದಟರು ಕಾರ ಮುಗಿಲೋ |
ದೇಹವೋ ದಾಡೆಗಳೊ ಮಿಂಚುಗಳೋ ಮಹಾದೇವ ||
ಬಾಹುಗಳ ಪೂರಯುದ ಬಿರುದಿನ |
ಹಾಹೆಗಳ ರಕ್ಕಸರು ಮಾರಿಯು |
ಸಾಹಸದಿನೆಱೆತರ್ಪ ಸುಭಟರು ನೆರೆದುದೊಗ್ಗಿನಲಿ ||೩೭||
ಉರದ ಗಂಟಲ ಬಱೆಯ ಕಿವಿಗಳ |
ಶಿರದ ಬಾಯ್ಗಳ ಕೊರಲ ಮೊಲೆಗಳ |
ಒರತೊಡೆದ ಮುಡುಹುಗಳ ದಾಡೆಯ ನೊಸಲ ನಾಸಿಕದ ||
ಹರಿಯ ವದನದ ಶರಭವಕ್ತ್ರದ |
ಉರಗವದನದ ವ್ಯಾಘ್ರವದನದ |
ಪರಿಪರಿಯ ಖಳಸುಭಟರೈದಿದರಾಹವಕ್ಕೊಡನೆ ||೩೮||
ಖಳನ ಮೊಗಸನ್ನೆಯಲಿ ನಡೆದುದು |
ಬಳಜಳಧಿ ಬೊಬ್ಬಿಡುತ ನಡೆತರೆ |
ಬಲು ಬಿರುದರೊಡನೊಡನೆ ತೂಳ್ದಿರು ಕಪಿಯ ತೋಱೆನುತ ||

ಹುಲುಗಪಿಯ ರೂಪಿನಲಿ ಹನುಮನು |
ಹಲುಗಿಱಿದು ಬರಿದುಱಿಸಿ ಗಿರಿಗಿರಿ |
ಗೊಳುತಲಿರೆ ಮುರಿಯೆನುತ ಮುತ್ತಿದರಥಟುಪಾಯದಳ ||೩೯||
ಹೊಡೆವ ತಂಬಟ ಭೇರಿ ಬೊಬ್ಬೆಯು |
ಗಡಬಡೆಯ ನಿಸ್ಸಾಳದಬ್ಬರ |
ಸಿಡುಸರದ ಹೆಗ್ಗಾಳೆ ಕೊಂಬಿನ ಗೌರುಗಾಳೆಗಳ ||
ಗಡಣದೆಪ್ಪತ್ತೇೞು ಕೋಟಿಯ |
ಕಡಲು ತಾಗಲು ಮೇಲೆ ದಿವಿಜರು |
ನಡುಗಿ ಗೂಳೆಯ ತೆಗೆದು ಹೊಕ್ಕುದು ನಳಿನಭವಪುರಿಗೆ ||೪೦||
ನೂಕಿದುದು ಚತುರಂಗಸೇನಾ |
ನೀಕವೊಂದೇ ಲಗ್ಗೆಯಲಿ, ನೆಗೆ |
ದಾಕಸವ ತೀವಿದುದು ಪದರಜವೇನ ಹೇೞುವೆನು ||
ಆಕಪೀಶ್ವರಬಲದ ಭಾರದ |
ಜೋಕೆಯನು ನೋಡುತ್ತಲಿರಲಂ |
ದಾಕೆವಾಳರು ಮುಂದೆ ನಿಂದರು ಹನುಮಗಿದಿರಾಗಿ ||೪೧||
ಹರಿಚರಣಸೇವಕನು ಬಳೆದುಱೆ |
ಮುರಿದನಾಮಣಿಮಾಡ ಕನಕದ |
ಪಿರಿಯ ಕಂಭವ ಜಡಿದು ಪಿಡಿದನು ದಂಡಧರನಂತೆ ||
ತಿರುಹಿ ಬೊಬ್ಬಿಱಿದಾರ್ದು ಸಮ್ಮುಖ |
ಕುರವಣಿಪ ಮುಂಗುಡಿಯ ಸುಭಟರ |
ನೆಱಗಿದನು ಕರಿಹಿಂಡುಗಳ ಬಱಿಸಿಡಿಲು ಹೊಡೆದಂತೆ ||೪೨||
ಬಿದ್ದುದಾಗಳೆ ಚೂಣಿ ಕಾಲಾ |
ಳೆದ್ದುದೊಂದೇ ಲಗ್ಗೆಯಲಿ ಫಡ |
ಹೊದ್ದು ಹಿಡಿ ಕೋಡಗವನೆಂದುರವಣಿಸಿ ಖಾತಿಯಲಿ ||
ಭದ್ರಕಾಯನನೆಂಟುದೆಸೆಯಲಿ |
ಛಿದ್ರಮಾಡಿದರೇನನೆಂಬೆ ಸ |
ಮುದ್ರ ವಡಬನ ಲಗ್ಗೆ ಮುಸಿವಂದದಲಿ ಮೂದಲಿಸಿ ||೪೩||

ಮುತ್ತಿದುದು ಖಳಸೇನೆ ಹನುಮನ |
ನೊತ್ತಿ ಬಳಸಿ ಮುಸುಂಡಿ ಬಲ್ಲೆಯ |
ಕಿತ್ತ ಕಡಿತಲೆ ಪರಶು ತೋಮರ ಭಿಂಡಿವಾಳದಲಿ ||
ಮತ್ತೆ ಕಕ್ಕಡೆ ಸರಳು ಚಕ್ರವ |
ಮೆತ್ತಿದರು ಪವನಜನ ನಭ ದಿ |
ಗ್ಭಿತ್ತಿಯೆತ್ತಲೆನಲ್ಕೆ ಮುಕ್ಕುರಿಕಿದರು ಬಳಸಿನಲಿ ||೪೪||
ದಿಟ್ಟ ಹನುಮನ ಮುಟ್ಟಿದಾಗಳೆ |
ಕೊಟ್ಟನೈ ಯಮಪುರಕೆ ಬಟ್ಟೆಯ |
ಮಿಟ್ಟೆಯಿಂದದಿ ಸಿಡಿದು ಬಿದ್ದರುದಾಯುಧಂಗಳಲಿ ||
ಇಟ್ಟವರನೇ ಮಡುಹುತಿರ್ದುದು |
ಅಟ್ಟಿದನು ಹನುಮಂತ ಕನಕದ |
ಗಟ್ಟಿಯನು ತಿರುಹುತ್ತ ಬೊಬ್ಬಿರಿದೆರಗಿದನು ಖಳರ ||೪೫||
ಎರಗಿದನು ಸಿಡಿಲಂತೆ ದನುಜರ |
ಶಿರ ಮುರಿಯೆ ಚರಣದಲಿ ತುಳಿತುಳಿ |
ದಿರದೆ ಬಾಲದೆ ಬೀಸಿಯೊಡನಪ್ಪಳಿಸಿದನು ನೆಲದೆ ||
ಜರುಹಿದನು ಚೌಪಟದ ರಕ್ಕಸ |
ರಿರಿದು ಸಂಹರಿಸಿದನು ಕಾಲಾ |
ಳರುಣಜಲಹೊನಲೇಳಿ ತೇಲಿದುವಸುರರಟ್ಟೆಗಳು ||೪೬||
ಆಳು ಮುರಿಯಲು ಕುದುರೆಕಾರರು |
ಮೇಳವಿಸಿ ನೂಕಿದರು ಕಡಿ ಕಡಿ |
ಖೂಳ ಕೋಡಗಕೆಸಿತು ಬಲುಹೆಂದೆನುತೆ ಖಾತಿಯಲಿ ||
ಬಾಳು ಬಲ್ಲೆಹ ಲೋಡಿ ಶರ ಕರ |
ವಾಳಗಳ ಜಡಿಯುತ್ತಲಾ ಹೇ |
ರಾಳರಾವುತರುಬ್ಬಿದರು ಕಪಿವರನನುರವಣಿಸಿ ||೪೭||
ವೀರ ಹನುವನ ಮೇಲೆ ಸರಳಿನ |
ಸಾರವನು ಸೈಗೆಡೆದ ರಾವುತ |
ಥಾರುಬಟೆಯಲಿ ಮುತ್ತಿದರು ಮೆತ್ತಿದರು ಹನುಮನನು ||

ಕಾರ ಮುಗಿಲೊಡ್ಡವಣಿ ಪವನನ |
ಸಾರಿ ಬದುಕುವುದುಂಟೆ ತುರಗದ |
ಭಾರಣೆಯ ಮೋಹರವ ತೊತ್ತಳಿದುಳಿದನಾಹನುಮ ||೪೮||
ತಾಳವೃಕ್ಷವ ಕಿತ್ತು ಧಾಳಾ !
ಧೂಳಿ ಮಸಗಲು ಹನುಮನೆಳಗಿದು |
ಧೂಳಿಪಟಮಾಡಿದನು ಖಳರಾವುತರ ಹಯದೊಡನೆ ||
ಕಾಲುಡಿದು ಶಿರವೊಡೆದು ತುರಗದ |
ಹೋಳಿಸೆಯೆ ದುರದುರಿಪ ರಕುತದ |
ಕಾಲುವೆಯೊಳುಳಿ ತೇಲಿದುವು ಹಯರಾವ್ತರಟ್ಟೆಗಳು||೪೯||
ತುರಗತತಿ ನುಗ್ಗಾಗೆಯಾಕ್ಷಣ |
ಕರಿಘಟಾವಳಿ ನೂಂಕಿದುದು ಕರಿ |
ಕರದ ಬಲ್ಲೆಹ ಲೌಡಿ ಕೊಂತದ ದಂತ ಸೂನಗೆಯ ||
ಪರಲ ಸಾರದ ಜೋದರೆಸುಗೆಯೊ |
ಳುರವಣಿಸಿದರನಂತರಾವಣ |
ರಿರದೆ ಹಳಚಿದರಂದು ಹನುಮನನೆಂಟುದಿಕ್ಕಿನಲಿ ||೫೦||
ಹನುಮ ನಿರುಕಿಸಿ ದೇವಿಯಿದಿರಲಿ |
ಕನಕ ದೀಪಸ್ತಂಭವನು ತುದಿ |
ಮನೆಯ ಜಾಡಿಸಿ ನೋಡಿ ಕಿತ್ತನು ಬಾಲದಂಡದಲಿ ||
ಕನಲಿ ಸುರಪತಿ ಗಿರಿಗಳೆಱಕೆಯ |
ಚಿನಕಡಿಯ ಮಾಳ್ಪಂತೆ ಜೋದರ |
ನನುವರದೆ ದಂತಾವಳಂಗಳ ಕೂಡೆಯೊಱಸಿದನು ||೫೧||
ಉಡಿದ ದಾಡೆಯ ನೆಲಕೆ ತುಂಡಿಸಿ |
ಕೆಡೆದ ಬರಿಕೈಗಳನು ಗಾಯದೆ |
ಕಡಿವಡೆದ ಕಾಲಾಳನಿಬ್ಬಗೆಯಾದ ದೇಹಗಳ ||
ಮಡಿದ ಜೋದರ ಹರಿವ ರಕುತದ |
ಕಡಲನೆಗ್ಗೆಸಱೊಳಗೆ ಹೊರಳುತ |
ದಡಿಗದಂತಿಯ ಶಿರಗಳೆಸೆದುವು ಕಳನ ಚೌಕದಲಿ ||೫೨||

ತೊಱೆದುವಾಸೆಯಲದಟು ಪಡೆಯಂ |
ದುಱುಬಿದುವು ತೇಜಿಗಳು ಸಾರಥಿ |
ಗಱುಹೆ ತೇಜಿಯು ಚಪ್ಪರಿಸಿ ದನಿಗೆಯ್ದು ಚಾಪವನು ||
ಕಱೆಯುತಗಣಿತ ಶರದ ಸೋನೆಯ |
ನಿಱಿ ಕಪಿಯನೆಂದೆನುತೆ ಮಿಗೆ ಬೊ |
ಬ್ಬಿಱಿದು ಹನುಮನ ತಱುಬಿದರು ಹದಿನೆಂಟು ದಿಕ್ಕಿನಲಿ ||೫೩||
ಕಂಡನುಱುಬುವ ರಥಿಕರನು ಮಾ |
ರ್ತಾಂಡಕುಲಜನ ಕಿಂಕರನು ಖತಿ |
ಗೊಂಡು ನೋಡಿದನುಪ್ಪರಿಗೆಗುಱಿ ನೆಗೆದು ಬೊಬ್ಬಿಱಿದು ||
ಗಂಡುಗಿಡಿಸುವೆಸಿವರನೆನುತು |
ದ್ದಂಡಬಲ ಹನುಮಂತ ತೇರಿನ |
ಹಿಂಡುಗಳ ಜಾಲದಲಿ ತೆಗೆದಪ್ಪಳಿಸಿದನು ನೆಲದೆ ||೫೪||
ಸಾರಥಿಗಳನು ಸೆಱೆದು ಬಿಸುಟನು |
ವಾರುವಂಗಳ ನಭಕೆ ಬೀಱುತೆ |
ವೀರಬಿರುದಿನ ಸಿಂಧಸೀಗುರಿ ಮುರಿದು ಗಾಲಿಗಳ ||
ಬೇರನವ ದೆಸೆದೆಸೆಗೆ ಚೆಲ್ಲುತೆ |
ಭೂರಿರಥಿಕರ ಧನುವ ತುಂಡಿಸಿ |
ಕಾರುಗಲಸಿದನಮಮ ಕಡುಹೆಂತುಟೊ ಕಪೀಶ್ವರನ ||೫೫||
ತೇರುಗಳು ಕಡಿವಡೆದು ರಣದೊಳು |
ಸಾರಥಿಯ ಶಿರವೊಡೆದು ಹೂಡಿದ |
ವಾರುವಂಗಳ ತರಿದು ಬಿರುದಿನ ಸಿಂಧ ಗಾಲಿಗಳ ||
ಭಾರಿಧನುವನು ಮುರಿಯೆ ರಥಿಕರು |
ಹೋರಿ ಕಡುಗವ ಜಡಿದು ದಿವಿಜರ |
ನಾರಿಯರ ತೋಳಿನಲಿ ಮೆಱೆದರು ಬೀರಸಿರಿವಡೆದು ||೫೬||
ನೋಡಿದನು ಮೈರಾವಣನು ಮುರಿ |
ದೋಡುತಿಹ ಚತುರಂಗಸೇನೆಯ |
ಕೂಡೆ ಹುಡಿಗುಟ್ಟಿದನು ಕಾರ್ಮುಕಗಳನು ದನಿಗೆಯ್ದು ||

ಮೂಡಿಗೆಯೊಳಂಬುಗಿದು ತಿರುವಿಗೆ |
ಹೂಡಿ ಬೊಬ್ಬಿಡುತಿಸುತೆ ಕೀಶ |
ಪ್ರೌಢನನು ತಾಗಿದನು ಖಳ ನಿಜಮೂಲಬಲಸಹಿತ ||೫೭||
ಕಂಡು ಹನುಮಂತನನು ದೂರದೆ |
ಗಂಡುಗಲಿ ಮೈರಾವಣನು ಪ್ರ |
ಚಂಡ ನಮ್ಮನು ನುಡಿಸದಿವನೊಳಹೊಕ್ಕನೆಂದೆನುತೆ ||
ದಿಂಡುಗೆಡಹುವೆನಿವನನೆನುತು |
ದ್ದಂಡ ಮೈರಾವಣನು ನಿಜಬಲ |
ಮಂಡೆವಡೆಯದೆ ಮೆತ್ತಿದರು ಹನುಮನನು ಬಾಣದಲಿ ||೫೮||
ಕೆರಳಿ ಕೇಸರಿ ಪುಟನೆಗೆದು ಮದ |
ಕರಿಗಳನು ಸೀಳ್ವಂತೆ ಹನುಮನು |
ಕರಚರಣಗಳನೂಱಿ ಪುಟನೆಗೆದಾಱಿ ಬೊಬ್ಬಿಱಿದು ||
ತುರಗ ಗಜ ಪಾದಾತ ರಥಿಕರ |
ಕರಚರಣ ಬಾಲದಲಿ ಹೊಯ್ ಹೊ |
ಯ್ದೊರಸಿದನು ಮೈರಾವಣನ ಮೆಯ್ಗಾವಲತಿಭಟರ ||೫೯||
ತೀರಿಹೋಯಿತು ಸೇನೆ ನಿನಗಿ |
ನ್ನಾರ ಬಲವುಂಟವರ ಕರೆ ತ್ರಿಪು |
ರಾರಿಯಡ್ಡೈಸಿದರೆ ಕೊಲುವೆನು ನಿಮಿಷಮಾತ್ರದಲಿ ||
ತೀರಿತಾಯುಷ ನಿನಗೆನುತೆ ಕಪಿ |
ವೀರ ಮೂದಲಿಸುತ್ತೆ ಬರಲವ |
ತೇರ ಸರಿಸಕೆ ಚಾಚಿ ಶರದಲಿ ಮುಸುಕಿದನು ಕಪಿಯ ||೬೦||
ಎಸೆವ ಕಣೆಗಳ ಮುರಿಮುರಿದು ಲಂ |
ಘಿಸಿದ ದನುಜರ ರಥಕೆ ಹೊಯ್ ಹೊ |
ಯ್ದಸಮಹಯಗಳ ಶಿರವ ಹಿಡಿದಪ್ಪಳಿಸಿ ಸೂತನನು ||
ಮಸಗಿ ಕೀಲ್ಗಳಸಚ್ಚುಗಾಲಿಯು |
ದೆಸೆದೆಸೆಗೆ ಹರಿಸಿದನು ಸಿಂಧವ |
ಕುಸುರಿದಱಿದನು ಕರದ ಕೋದಂಡವನು ಖಂಡಿಸಿದ ||೬೧||

ಪಡಿರಥಕೆ ಮೂದಲಿಸಿ ಬರಲವ |
ನುಡಿದು ಕೆರಳುವ ಮರಳಿ ಬಂದರೆ |
ಹುಡಿಹುಡಿಯು ಮಾಡಿದನು ಬಿಡದೈಸೂಱು ಸೂೞಿನಲಿ ||
ಹಿಡಿದ ಸಾಪಿರ ಬಿಲ್ಲುಗಳ ಮುರಿ |
ದೊಡನೆ ಮೈರಾವಣನ ಶಿರ ಮೆ |
ಯ್ಯುಡಿಯೆ ಮಕುಟವ ಕಿತ್ತು ಪುಟನೆಗೆದೊಡನೆ ಕಲಿಹನುಮ ||
ನೆಲಕಿೞಿದು ಮೈರಾವಣನು ಬಲು |
ಹಲಗೆ ಕಡುಗವ ಕೊಂಡು ಗರ್ಜಿಸಿ |
ಹುಲುಕಪಿಯೆ ಬೀೞೆನುತೆ ಹೊಯ್ದನದೇನನುಸಿರುವೆನು ||
ಕುಲಿಶರೋಮವನಿೞಿದು ಹನುಮನ |
ತಲೆಯ ತಾಕಿತು ಖಡ್ಗವರುಣದ |
ಜಲವೊಡನೆ ಕಡಲಂತೆ ಮಡುಗಟ್ಟಿದುದು ಬೇಗದಲಿ ||೬೩||
ಕೆರಳಿದನು ಹಮುಮಂತನಸುರನ |
ಕರದ ಕಡಿತಲೆ ಹಲಗೆಗಳನುಱೆ |
ಬರಸೆೞೆದು ಬಿಸುಟೊಡನೆ ಶಕ್ತಿಯೊಳಿಡಲದನು ಮುರಿದು ||
ಭರದೆ ಬಾಲದೊಳ್ಳೈದು ಕೊರಳನು |
ಮುರಿಯೆ ಸುತ್ತಲು ದನುಜ ಹನುಮನ |
ಕೊರಲ ಹಿಡಿದೊತ್ತಿದನು ಬಿದ್ದರು ಭಟರು ನೆಲಕಂದು ||೬೪||
ಎದ್ದರಿಬ್ಬರು ಹೊಱದೆಗೆದು ನೆಲ |
ಕುದ್ದಿದರು ಕರತಳವ ರೋಷದಿ |
ಹೊದ್ದಿ ಹೊಡೆದಾಡಿದರು ಮೂರುತಿರಾವಣರು ಭರದೆ ||
ಭದ್ರದೇಹನ ಭರವಸಕೆ ತಳ |
ಕದ್ದುದಿಳೆ ಭುಜಯುಗವ ಹೊಯ್ಯುತೆ |
ರುದ್ರರೂಪರು ಮಸಗಿದರು ಬಹುಮಲ್ಲಯುದ್ಧದಲಿ ||೬೫||
ಎಲವೊ ನಮ್ಮ ವಿಭೀಷಣನ ಕಳ |
ಕಳಿಪ ರೂಪನು ತಳೆದು ರವಿಕುಲ |
ತಿಲಕರಿಬ್ಬರ ನಿದ್ರಿಸುವ ವೇಳೆಯಲಿ ತಂದೆಯಲಾ ||

ಖಳ ಎನುತ ಹಲುಮೊರೆದು ಬೊಬ್ಬಿಡೆ |
ಖಳತಿಲಕ ಮೈರಾವಣನು ಫಡ |
ತ್ರೂಲಗೆನುತೆ ಮೂದಲಿಸುತ್ತೈದಿದ ಹನುಮಗಿದಿರಾಗಿ ||೧೬||
ತ್ರೋಱಿದರು ಬಹುಚಿತ್ರಗತಿಗಳ |
ತೋಱಿದರು ಬಹು ಕೌಶಲಂಗಳ |
ತೋಱಿದರು ಬಹು ದೃಷ್ಟಿಮುಷ್ಟಿಯ ಪಾಡುಪಂತಗಳ ||
ತೋಱಿದರು ಬಹು ಲಾಗುವೇಗವ |
ತೋಱಿದರು ಬಹು ಮುರುಹುಗಳನಿಂ |
ತೋಱಿದರು ಬಹು ಮಲ್ಲಯುದ್ಧವನೊಬ್ಬರೊಬ್ಬರಲಿ ||೧೭||
ಆವ ವಹಿಲದಿ ಹೊಕ್ಕು ತಿವಿವರ |
ದಾವ ವಹಿಲದಿ ಹೊಱದೆಗೆವರಿ |
ನ್ನಾವ ವಹಿಲದೆ ಹೊಗುವರೋ ಸವ್ಯಾಪಸವ್ಯದಲಿ ||
ಆವ ಪರಿಯಲಿ ಸಮರವೆಸಗುವ |
ರಾವನಿದ ವರ್ಣಿಪನೊ ಹರಹರಿ |
ದಾವ ತೆಱದಾಮಲ್ಲಯುದ್ಧವೊ ತಿಳಿಯೆ ನಾನೆಂದ ||೧೮||
ರುದ್ರಕೋಪವ ತಾಳಿ ವೀರರ |
ವುದ್ರಮುಖದಿಂದೆಱಗುತಿರಲಾ |
ಛಿದ್ರತದಿ ಮೈ ನೆಗ್ಗಿದುದು ತನುಗಳಲ ಹೋರಟಗೆ ||
ನಿದ್ರೆ ಕವಿವಂದದಲಿ ಒೞಿಲುತೆ |
ಭದ್ರದೇಹದ ಭಟರು ಹೊಱದೆಗೆ |
ದದ್ರಿ ತಾಗುವ ತೆಱದೆ ಹೊಯ್ದಾಡಿದರು ಖಾತಿಯಲಿ ||೧೯||
ಧುರದ ತಿವಿಗಳ ದನಿಗೆ ಭೂಮಿಯ |
ಧರಿಸಿದಾನೆಗಳಳುಕಿದುವು ತರ |
ತರಿಸಿ ಬಸವೞಿಯುತ್ತೆ ಬಲು ಬವರಿಗಳಲಂಕರಿಸಿ ||
ಭರದಿ ನೊಂದನು ದಾನವನು ಮದ |
ಮುರಿದು ಹನುಮನ ಮೇಲುವಾಯಲು |
ತಿರುಗಿ ಗಿರಿಗಿರಿಗುಟ್ಟಿ ಕರುಣವ ಕೊಂಡು ಪುಟನೆಗೆದ ||೨೦||

ನೆಗೆದ ಹನುಮನ ಬಾಲವನು ಹಿಡಿ |
ದೊಗೆದು ಮೈರಾವಣನು ಭರದಲಿ |
ಚಿಗಿದನಾಹನುಮಂತ ಮೈರಾವಣನುರವನೊಗೆದು ||
ಗಗನಕ್ಕೈದಲು ಕೆರಳಿ ದಾನವ |
ಮಗುಳಿ ಹನುಮನ ಹಿಡಿದು ತಕ್ಕೆಯ |
ಬಿಗಿದು ಕರವೆರಡರಲಿ ತಿವಿದನು ಹಸ್ತವೆಂಟರಲಿ ||೭೧||
ಸಂದುಸಂದನು ತಿವಿಯುತಿರೆ ಖರೆ |
ನೊಂದು ಹನುಮನು ಮನದೊಳಗೆ ದಶ |
ಕಂಧರನಿಗಿಂ ಮಿಗಿಲು ಸೂರ್ಮಡಿಯೆನುತ ಬೆರಗಾಗಿ ||
ಮುಂದುವರಿದೊಳಹೊಕ್ಕು ದನುಜನ |
ಕಂಧರವ ತಿವಿಯಲು ಮಹಾಗಿರಿ |
ಯಂದದಲಿ ನೆರೆ ತಿರುಗಿ ಬಸವಳಿಯುತ್ತ ಘೂರ್ಣಿಸಿದ||೭೨||
ಎದ್ದು ಹನುಮಂತನನು ತಿವಿದರೆ |
ನಿದ್ದೆ ಕವಿದಂದದಲಿ ಮೆಯ್ಮರೆ |
ದೆದ್ದು ನಿಮಿಷಕೆ ಕಣ್ದೆರದು ಹನುಮಂತ ಚೇತರಿಸಿ ||
ಒದ್ದು ಕೆಡಹುವೆನೆನುತ ಸೀತೆಯ |
ಕದ್ದ ಕಳ್ಳನ ಸಖನ ತುಡುಕಲು |
ಹೊದ್ದಿ ಹೊಯ್ದಾಡಿದರು ಕರಕಿಡಿಮಸಗೆ ರೋಷದಲಿ ||೭೩||
ಹೊಕ್ಕು ಮೈರಾವಣನ ತಿವಿಯಲಿ |
ಕುಕ್ಕಿನಂದದ ದೇಹ ನೆರೆ ಬಿರಿ |
ದೊಕ್ಕುದಾಗಳೆ ಕರುಳು ಚೆಲ್ಲಿತು ಖಂಡ ದೆಸೆದೆಸೆಗೆ ||
ಅಕ್ಕುದಾಕ್ಷಣ ಮಗುಳೆ ದೇಹವ |
ಹೊಕ್ಕು ಬಲುಹಿಮ್ಮಡಿಸಿ ಹನುಮನ |
ನಿಕ್ಕಿದನು ಖಳರಾಯನುನ್ನತ ಬಾಹುಸತ್ವದಲಿ ||೭೪||
ದಡದಡಿಸಿ ಹನುಮಂತ ಹಿಂದಕೆ |
ಹಿಡಿದು ಬೀಳುತ ಚೇತರಿಸಿ ಕೈ |
ಯೊಡನೆ ತಿವಿದನು ಖಳನ ಬದಿಯೆಲು ನುಗ್ಗುನುಸಿಯಾಗೆ ||

ಕೆಡಹಿದನು ಕುಸುಕಿಱಿದು ಹೊಟ್ಟೆಯ |
ಮಡದೊಳಗೆ ಘಟ್ಟಿಸಲು ಬಲು ತನು |
ವೊಡೆದು ಸುರಿದುದು ಕುರುಳು ಖಳ ಕಾಱಿದನು ಶೋಣಿತವ||
ಮಡಿದನೈ ಖಳನೆನುತ ಹನುಮನು |
ಬಿಡಲು ಮತ್ತಾ ಕರುಳು ಮಾಂಸದೊ |
ಳೊಡನೆ ತನುವನು ತುಂಬಿ ಬೊಬ್ಬಿಱಿಯುತ್ತೆ ಸಿಂದಿರ್ದು ||
ಒಡನೆ ಹನುಮನ ತಿವಿಯೆ ಗಾಯವ |
ತಡೆದು ಜೊಕ್ಕೆಯದೊಳಗೆ ಮುಂದಲೆ |
ಪಿಡಿದು ತಿವಿದಾಡಿದರು ಕೇಶಾಕೇಶಿಯುದ್ಧದಲಿ ||೭೬||
ಹೊಕ್ಕು ಮೈರಾವಣನು ಕೋಪದೆ |
ತಕ್ಕವಿಸಿ ಕೆಡಹಿದನು ಹನುಮನ |
ನಿಕ್ಕಲದ ಯೆಲುಮುರಿಯೆ ತಿವಿದನು ಕೂಡೆ ತಿವಿತಿವಿದು ||
ಬಿಕ್ಕುಳಿನ ಮೇಲುಸಿರು ನೂಕಲು |
ಸಿಕ್ಕಿದನು ಮಗನೆನುತ ಮಾರುತ |
ನಕ್ಕಱಿಂ ಬಲವೀಯೆ ದನುಜನ ಕೊಡಹಿ ಸಿಂದಿರ್ದ ||೭೭||
ಖಳನ ಬಲವತಿ ಬಲುಹು ದನುಜನ |
ಗೆಲುವ ಪರಿಯೆಂತೆನುತ ಚಿಂತಿಸಿ |
ಕಲಿಹನುಮ ರಾಘವನ ಚರಣವ ನೆನೆದು ಮನದೊಳಗೆ ||
ಬಲುಹು ನೂರ್ಮಡಿಯಾಗೆ ರೋಷದಿ |
ಹಲು ಮೊರೆದು ಪ್ರಟನೆಗೆದು ಬೊಬ್ಬಿಱಿ |
ದಲಘುಭುಜಬಲ ಹನುಮ ನೆನೆದನು ಮನದೆ ಸಿಜಪಿತನ ||
ಮುಚ್ಚಿದನು ಕಂಗಳನು ರೋಷವ |
ಹೆಚ್ಚಿಸಿದ ಹೃದಯದಲಿ ಪವನನ |
ಜೆಚ್ಚ ಬಿಡಿಸಿದ ತಾಸು ಮಾರುತಮಂತ್ರಪಠಣೆಯಲಿ ||
ಸಚ್ಚರಿತಸಾಗಲೆಸೆ ತನಯಗೆ |
ಮೆಚ್ಚಿ ಸಿಜವನು ತೋಱಿ ಕಾರಿಯ |
ದಿಚ್ಛೆಯನು ತಾಸೀವೆ ಬೇಡೆನೆ ಹನುಮಸಿಂತೆಂದ ||೭೮||

ದೇವ ಬಿನ್ನಹ ಚಿತ್ತವಿಸು ಮೈ |
ರಾವಣನ ತಡೆಗಡಿದು ರಾಘವ |
ದೇವ ಲಕ್ಷ್ಮಣರಿಬ್ಬರನು ಕೊಂಡುಯ್ವ ಕಾರ್ಯವನು ||
ನೀವು ಕೃಪೆಮಾಡುವುದೆನಲು ಕರು |
ಣಾವಲೋಕನದಿಂದೆ ಮಗನೊಳು |
ತೀವಿದುತ್ಸಾಹದಲಿ ಮರ್ಮವನುಸುಹಿದನು ಮರುತ ||೮೦||
ಖಳನ ಮಧ್ಯದ ನೆತ್ತಿಯೊಳು ನಿ |
ರ್ಮಳದ ಮಾಣಿಕವೊಗೆದಿಹುದು ನೀ |
ನಳುಕದದ ಕಿತ್ತಿಡಲು ದನುಜನ ಶಕ್ತಿ ಕುಂದುವುದು ||
ಬಳಿಕ ಕೈಕಾಲುಗಳ ತುಂಡಿಸಿ |
ನೆಲಕೆ ದಿಗುಬಲಿಗುಡಲು ಹರಣವು |
ಕಳಿದುಹೋಹುದು ತಥ್ಯವೆಂದುಸುಹಿದನು ತನಯಂಗೆ ||೮೧||
ಮಗನ ಕರ್ಣವ ಸಾರಿ ಮಾರುತ |
ನಗುತ ಹೇಳಿದ ಮರ್ಮವೆಲ್ಲವ |
ವಿಗಡ ಮೈರಾವಣನು ಮಾಯಾತತ್ವದಿಂದಳಿದು ||
ಜಗದೊಡೆಯ ರಾಘವನ ಕೂಡುವ |
ಬಗೆಯನೇ ನಿಶ್ಚಯಿಸಿ ಮನದೊಳು |
ತೆಗೆದು ಹರಿಮೂರ್ತಿಯನು ಮುಕುತಿಗೆ ಮನವ ಕೈಕೊಂಡ||
ಎರಗಿದನು ಹನುಮಂತದೇವನ |
ಬಲಸಿಡಿಲು ಹೊಯ್ವಂತೆ ಹೊಯ್ಯಲು |
ತಲಹರಿಸಿ ಹನುಮಂತ ಹಿಡಿದನು ಖಳನ ಮುಂದಲೆಯ ||
ಬರಸೆಳೆದು ಕೆಡಹಿದನು ಮಧ್ಯದೆ |
ಮೆರೆವ ರೊಂಡವ ಕಿತ್ತು ರತುನವ |
ಮುರಿದು ಬಿಸುಟನು ಹನುಮ ಶ್ರೀರಘುರಾಮ ಶರಣೆನುತ||
ಕ್ರೂರ ಕೈಕಾಲುಗಳ ತುಂಡಿಸಿ |
ಧಾರಿಣಿಗೆ ದಿಗುಬಲಿಯ ಕೊಟ್ಟನು |
ಘೋರದಾನವನೊಡಲಿನಿಂ ವರಕಾಂತಿಪುಂಜವದು ||

ಸೂರಿಯನ ಮಂಡಲವನೈದಿತು |
ಧೀರ ಹನುಮನ ಬೆಱಗ ಕಾಣಲು |
ಶೋಣಿತ ಕಾಯದೆ ರುಧಿರ ಹರಿದುದು ಕಡಲ ಪರಿಯಿಂದ ||
ಅತ್ತಲಾದೋರ್ದಂಡಿ ದನುಜರು |
ಕೃತ್ರಿಮವ ಮಾಡುವರೆನುತ ನಿಜ |
ಪುತ್ರನನು ಕಾಹಿರಿಸಿ ಬೞಿಕಲತೀವವಹಿಲದಲಿ ||
ಸುತ್ತ ಸೇವಕ ಜನವಿರಿಸಿ ಪುರು |
ಷೋತ್ತಮನ ಕಿಂಕರನು ಬಲು ನಲಿ |
ಯುತ್ತ ಬರುತಿರೆ ಮುಂದೆ ಕಂಡಳು ಕೊಳುಗುಳದ ಸಿರಿಯ ||
ಧರೆಗೆ ದಾಡೆಯನೂಱಿ ಕಿಬ್ಬದಿ |
ಮುರಿದು ಮುಗ್ಗಿದ ದಂತಿಘಟೆಗಳ |
ಖುರವೊಡೆದು ಬಸಿಱಿಱಿದು ಕೆಡೆದಿಹ ತೇಜಿವಿಂಡುಗಳ ||
ಅಱಿದ ಶಿರ ಕರಚರಣ ಖಂಡಿಸಿ |
ಹಱಿದು ಕೈಕಾಲುಗಳನಗಲಕೆ |
ಮುಱಿದ ರಥಗಳ ರೌರವದ ರಣಭೂಮಿ ರಂಜಿಸಿತು ||೮೬||
ಹರಿವ ರಕುತದ ಸುರಿವ ಕರುಳಿನ |
ದುರುದುರಿಪ ಖಂಡಗಳ ಮುಂದಲೆ |
ಬಿರಿದ ಗಾಯದ ಮುರಿವುಗಳ ನೆಣವಸೆಯ ತೊರಳೆಗಳ ||
ತೆರಳಿ ಜೋಲುವ ತೊವಲ ಜಿಗಿಯೊಳು |
ಹೊರಳುವರೆ ಜೀವದ ಭಟಾಳಿಯ |
ನೆರಳುವತಿವೇದನೆಯೊಳೊಪ್ಪಿತು ರೌದ್ರರಣರಂಗ ||೮೭||
ಸತ್ತಿಗೆಯ ಚಾಮರದ ಹಡಪದ |
ವೃತ್ತಕಾಳಾಂಜಿಗಳ ಗಿಂಡಿಯ |
ಸುತ್ತಮದ ಸೀಗುರಿಯನಗಣಿತ ತಾಳವೃಂದಗಳ ||
ಮುತ್ತಿನೆಕ್ಕಾವಳಿಯ ಮಕುಟದ |
ಹತ್ತುಸರ ಬಾವುಲಿಯ ಕಡೆಯದ |
ರತ್ನಕಂಕಣಪದಕಮುದ್ರಿಕೆಯೆಸೆದುವಗಳಧಲಿ ||೮೮||

ಪರಶು ತೋಮರ ಕುಂತವಸಿ ಮು |
ದ್ಗರ ಮುಸುಂಡಿ ಗದಾತಿಭಲ್ಯದ |
ಸರಳ ಧನು ಕಕ್ಕಡೆಯ ಭಾರಿಯ ಭಿಂಡಿವಾಳಗಳ ||
ಪರಿಘವಂಕುಶ ಶಕ್ತಿಲೌಡಿಯ |
ಹರಿಗೆ ಖಂಡೆಯ ಸಬಳ ಮೊದಲಾ |
ದುರುತರದ ಬತ್ತೀಸ ಕೈದುಗಳೆಸೆದುವಗಲದಲಿ ||೮೯||

ಜೋಡು ಸೀಸಕ ಬಾಹು ರಕ್ಷೆಯ |
ಮೂಡಿಗೆಯ ಮೊಳ್ಟೆಯದ ಸವಗದ |
ಸೀಡುಗಳ ಗಬ್ಬಿಗೆಯ ಮೊಗರಂಬಗಳ ಹಲ್ಲಣದ ||
ಖೇಡಯುದ ಗುಳ ಜೀಂಜೆ ಹೊರಜೆಯ |
ದಾಡೆ ಸೂಸಗೆ ನಿಗಳ ಪಟ್ಟೆಯ |
ನಾಡೆ ಕಟ್ಟಿಗೆ ಕೊಡಲಿಗಳಿನೊಪ್ಪಿದುದು ರಣರಂಗ ||೯೦||

ಅರೆದೆರೆದ ಕಣ್ಣುಗಳ ತುಡುಕುವ |
ಸೆರೆದ ವಾಯುಸತತಿಯ ಮುಂಡದ |
ಜರಿವ ಖಂಡದ ಕಿಡಿಕಿರಿದ ಕಬ್ಬಕ್ಕಿಪರ್ಬುಗೆಯ ||
ಪರಿಪರಿಯ ಹೆಣದಡಗ ಕೀಱುವ |
ಹಿರಿಯ ಶುನಕನ ಸಂಕುಲಂಗಳ |
ತರುಳ ಕಟವಾಯಿಗಳ ಜಂಬುಕನಿಕರವೊಪ್ಪಿದುದು ||೯೧||

ಉಡಿದ ಕೈಕಾಲುಗಳ ರುಂಡವ |
ಸಡಸುತಿಹ ಶಾಕಿನಿಯ ಮೊತ್ತದ |
ನಿಡುಗರುಳ ನೆಣವಸೆಯ ನುಂಗುವ ಭೂತಸಂಕುಲದ ||
ಒಡಲ ಬಗಿಬಗಿದಡಗ ತಿನ್ನುತ |
ದಡಿಗ ಪ್ರೇತಪಿಶಾಚ ರಕುತವ |
ಕುಡಿದು ಸೊಕ್ಕಿದ ಭೂತವೇತಾಳಂಗಳೊಪ್ಪಿದುವು ||೯೨||

ನಿಂದ ರಕುತದ ಮಡುವಿನೊಳಗಾ |
ನಂದದಿಂ ಮುಳುಗಾಡಿ ತನ್ನೊಳು |
ಸಂದಣಿಸಿ ಹೊಯ್ದೊಬ್ಬರೊಬ್ಬರನಿಡುತ ಖಂಡದಲಿ ||

ಇಂದಿನಲಿ ಮಾನೋಮಿ ತಮಗಾ |
ಯ್ತೆಂದು ನಾನಾಭೂತಸಂತತಿ |
ಯೆಂದು ಹನುಮನ ಹರಸಿದುವು ತಮತಮಗೆ ಹರ್ಷದಲಿ ||
ಬಂದಳಾದೋರ್ದಂಡಿ ಹನುಮನ |
ಮುಂದೆ ನಿಂದಚ್ಚರಿಯ ನೋಡುತ |
ಲಂದು ಮೆಯ್ಯಿಕ್ಕಿದಳು ಕಪಿರಾಜೇಂದ್ರಪಾದದಲಿ ||
ತಂದೆ ರಕ್ಷಿಸು ದೇವ ಕರುಣಾ |
ಸಿಂಧು ರಕ್ಷಿಸು ಶರಣಜನನಿಜ |
ಬಂಧು ರಕ್ಷಿಸೆಸುತ್ತ ಕೊಂಡಾಡಿದಳು ಭಕ್ತಿಯಲಿ ||೧೫||
ಎತ್ತಿದನು ಹನುಮಂತ ದಾನವಿ |
ಯುತ್ತಮಾಂಗವ ನುಡಿದ ಭಾಷೆಯ |
ನಿತ್ತಪೆನು ನೀನಂಜಬೇಡೆನುತಭಯಕರವಿತ್ತು ||
ಅತ್ತ ಪುರಜನ ಬೆದರುತಿರೆ ಕರ |
ವೆತ್ತಿ ಭೀತಿಯ ಬಿಡಿಸಿ ನಗರದ |
ಸುತ್ತ ಡಂಗುರವೊಯ್ಸೆನುತ ಬೆಸಸಿದನು ದಾನವಿಗೆ ||೧೬||
ಲೀಲೆ ಮಿಗೆ ಹನುಮಂತ ಸೀತಾ |
ಲೋಲನಾವೆಡೆ ತೋರಿಸಲು ಪಿಳ |
ಬಾಲೆ ನುಡಿದಳು ಕಂಕಣಾದೇವಿಯರು ನೆಲಸಿರುವ ||
ಆಲಯದೊಳೊರಗಿಹರು ದನುಜರ |
ಗಾಳಿ ಹೊದ್ದದ ತೆರದೆ ತನ್ನಯ |
ನೀಲಮೇಘನನಿರಿಸಿದೆನು ಕಾವಲ್ಗೆ ಜೀಯೆನಲು ||೧೭||
ಕಾಲ ಘಟ್ಟಣೆಗದುರಲಿಳೆ ನವ |
ನೀಲಕುಟ್ಟಿಮವೊಡನೆ ಬಿರಿದುವು |
ಸಾಲತೋರಣಲೋವೆ ಮುರಿದುವು ಮೆಯ್ಯ ಸೋಂಕಿನಲಿ ||
ತೋಳಗಾಳಿಗೆ ಪೈಸರಿಸಿದುವು |
ಮೇಲುನೆಲೆಯುಪ್ಪರಿಗೆ ನೋಟಕ |
ರಾಳಿಯುಳುಕಲು ಬಂದ ಕಪಿ ದೇವತೆಯ ಮಂದಿರಕೆ ||೧೮||

ಆವನದ ಮಧ್ಯದಲಿ ಬೆಳೆದಿಹ |
ತಾವರೆಯ ಕೊಳದೊಳಗೆ ಮಿಂದನು |
ದೇವರಾಘವನಿದ್ದೆಡೆಗೆ ಮೆಯ್ಯಿಕ್ಕುತೈತಂದ ||
ತೀವಿದುತ್ಸಾಹದಲಿ ವಂದಿಸಿ |
ಭಾವಿಸುತಲಾರಾಮಮೂರ್ತಿಯ |
ಪಾವನದ ನಾಮವನು ನೆನೆಯುತ್ತಿರ್ದನಾಹನುಮ ||೯೮||
ನೀಲಮೇಘನು ಬಂದು ಹನುಮನ |
ಕಾಲಿಗೆಱಗಿದೊಡೆತ್ತಿದನು ತರ |
ಹೇಳಿ ಮಂಗಳವಸ್ತುಗಳನೆನೆ ತಂದರಾಕ್ಷಣಕೆ ||
ಪಾಲಸಚಿವರ ಗಡಣದಲಿ ರಾ |
ಜಾಲಯಕೆ ಕರೆತಂದು ಸಿಂಹದ |
ಮೇಲುಪೀಠವ ತರಿಸಿದನು ಹನುಮಂತ ಹರ್ಷದಲಿ ||೯೯||
ಕರೆ ಕುಮಾರನನೆನುತ ಬೇಗನೆ |
ಕರೆಸಿದನು ಭೂದೇವತತಿಯನು |
ವರರತುನಸಿಂಹಾಸನದ ಮೇಲಿರಿಸಿ ಖಳಪತಿಯ ||
ಶಿರದೊಳಭಿಷೇಕವನು ಮಾಡಲು |
ಕರವೆಸೆವ ಪಟ್ಟವನು ನೊಸಲೊಳು |
ಮರುತನಂದನ ಬಿಗಿದ ಶುಭಲಗ್ನದಲಿ ನೆರೆ ಹರಸಿ ||೧೦೦||
ಮಂಗಳಾರತಿಯೆತ್ತಿದರು ದನು |
ಜಾಂಗನೆಯರಾನೀಲಮೇಘಗೆ |
ಕಂಗೊಳಿಪ ಬಹುವಾದ್ಯ ಮೊಳಗಿದುವತುಳಹರ್ಷದಲಿ ||
ತುಂಗಸಿಗಮುದ ಭೂಸುರರ ಮಂ |
ತ್ರಂಗಳಿಂದಕ್ಷತೆಯ ಚೆಲ್ಲಲು |
ಸಿಂಗರದೊಳಾನೀಲಮೇಘನು ಮೆಱೆದನೊಲವಿನಲಿ ||೧೦೧||
ತಂದು ಕಾಣಿಕೆಯಿಕ್ಕಿದರು ಜನ |
ವೃಂದ ಕಂಡುದು ನೀಲಮೇಘನ |
ಕುಂದದುಡುಗೊಱೆಸಹಿತ ವೀಳಯವಿತ್ತನೊಲವಿನಲಿ ||

ಅಂದು ಹನುಮನ ಚರಣಕಮಲ |
ದ್ವಂದ್ವದೊಳು ಖಳಲಲನೆಯರು ನಲ |
ವಿಂದೆ ಮೆಯ್ಯಿಕ್ಕುತ್ತೆ ಭಕ್ತಿಯ ಕಡಲೊಳಾೞಿದರು ||೧೦೨||
ಹರೆದು ದೋಲಗವಿತ್ತ ದಾನವ |
ರರಸ ದೋರ್ದಂಡಿಯರು ದಿವ್ಯಾ |
ಭರಣವಸ್ತ್ರಸುಗಂಧದಲಿ ಹನುಮಂತನೊಡಗೂಡಿ ||
ಅರಸರಾಘವ ಲಕ್ಷ್ಮಣಾರ ವರ |
ಚರಣಕವ ಕಾಣಿಕೆಯನಿತ್ತರು |
ದರುಶನವ ಮಾಡಿದರು ಮೆಯ್ಯಿಕ್ಕಿದರು ಪದಯುಗದೆ ||
ತರಣಿಯುದಯದ ಮುನ್ನ ಪಾಳೆಯ |
ಕುರವಣಿಸಬೇಕೆಂದು ವಾನರ |
ರರಸನಾರಘುರಾಮಚಂದ್ರನ ನಿದ್ದೆಗಿಡದಂತೆ ||
ಮೆಱೆವ ಮಂಚವನೊಡನೆ ಶಿರದೊಳು |
ಧರಿಸಿ ಕಲಿಹನುಮಂತ ಲಂಕಾ |
ಪುರವ ದಾಂಟಿದು ಕಂಡ ನಿಜಸುತ ಮತ್ಸ್ಯವಾನರನ ||೧೦೪||
ಭರದೆ ಕಂಡನು ಮತ್ಸ್ಯವಾನರ |
ಹರಿಸದಿಂದಿದಿರೆದ್ದು ರಾಮನ |
ಚರಣಕಭಿವಂದಿಸಿದನಾಕ್ಷಣ ಹನುಮನಿಗೆ ನಮಿಸಿ ||
ಧುರದ ವೃತ್ತಾಂತವನು ದನುಜನ |
ನೊರೆಸಿದಂದವ ನೀಲಮೇಘನ |
ನಿರಿಸಿದಂದವನೊರೆದು ಕಪಿ ಬೀೞ್ಕೊಟ್ಟ ನಂದನನ ||೧೦೫||
ಬೀೞುಕೊಟ್ಟನು ನೀಲಮೇಘನ |
ನಾಲಯಕೆ ವಾರಿಜದ ನಾಳದೆ |
ಮೇಲಕಡರಿದ ಹನುಮ ನಿಮಿಷಕನಂತಯೋಜನವ ||
ಕಾಲಮೇಘವನೊಡೆದು ದಿನಕರ |
ನಾಲಿಗುೞಿ ಹೊಳೆವಂತೆ ಹನುಮನು |
ಬಾಲರವಿಯಂತೆದ್ದು ಕಮಲದ ಕರ್ಣಿಕೆಗೆ ಬಂದ ||೧೦೬||

ಹೊಳೆವ ಬೆಳುದಿಂಗಳನು ಕಂಡನು |
ಬಲುಭುಜದ ಹನುಮಂತದೇವನು |
ಗಳಿಗೆಯಿನ್ನೆರಡುಂಟು ದಿನಕರನುದಯಕೆಂದೆನುತ ||
ಕೊಳನ ತಡಿಗೈತರಲು ಖಗಸಂ |
ಕುಲ ನಲಿದು ದನಿಗೊಡಲು ತನಯನ |
ಬಱಲಿಕೆಯನಾಱಿಸಲು ಸುೞಿದನು ಮರುತನಿದಿರಿನಲಿ||೧೦೭||

ಎಳದಳಿರ ಸುೞಿವಾಲವಟ್ಟದ |
ಕೊಳನ ತೆರೆ ತುಂತುರ ತುಷಾರದ |
ನಳಿನ ಪತ್ರದೊಳೆಸೆವ ಕರ್ಪೂರಗಗಳ ಹಳುಕುಗಳ ||
ಜಳಜಗಂಧರಸಾಯನಂಗಳ |
ಅಳಿಗಳುಲುಹಿನ ಮೃದುವಚನದಿಂ |
ದೊಲಿದು ಸತ್ಕರಿಸಿದನು ಋತುಪತಿ ರಾಮಲಕ್ಷ್ಮಣರ||೧೦೮||

ಚೆಲುವ ರಾಮನು ಬರಲು ರಜನೀ |
ಲಲನೆ ತಂದಾರತಿಯನೆತ್ತುವ |
ತಳಿಗೆ ಮುತ್ತಿನ ಸೇಸೆಯೆಂಬಂದದಲಿ ಶಶಿಬಿಂಬ ||
ಹೊಳೆವ ತಾರಾವಳಿಗಳೆಸೆದಿರ |
ಲುಲಿದುವು ರಘುಪ ಸುಮುಖನೋಎನು |
ತಳಿಗಳೊಸಗೆಯ ಕೇಳುವೆವ್ವನಡೆಯೆನುತ ಕಮಲಗಳ||೧೦೯||

ಘನಮಹಿಮ ಶ್ರೀರಾಮಲಕ್ಷ್ಮಣ |
ರನು ವಿನತೆಯಾತ್ಮಜನ ತೆಱದಿಂ |
ಹನುಮ ಹೆಗಲಲಿ ಹೊತ್ತು ಬರುತಿರೆ ಕಪಿಕಟಕದೆಡೆಗೆ ||
ದಿನಕರಪ್ರಭೆಯಂತೆ ಹೊಳೆಯುತ |
ಲಿನಕುಲರು ಬರುತಿರಲು ಕಂಡಾ |
ವನಚರರು ಪುಟನೆಗೆದು ನಲಿದಾಡಿದರು ಹರುಷದಲಿ ||೧೧೦||

ಕಂಡು ದೂರದಿ ವೀರವಾನರ |
ಮಂಡಳಿಕರಿದಿರೆದ್ದು ಬಂದರು |
ಪುಂಡರೀಕಾಕ್ಷಂಗೆ ವಂದಿಸಿ ಲಕ್ಷ್ಮಣಂಗೆಱಗಿ ||

ಕೊಂಡು ಕೊನೆಯುತ ಹನುಮದೇವನ |
ಕಂಡು ತಾ ಬಿಗಿಯಪ್ಪಿ ಭೂಪಸ್ಥಳ |
ಕೊಂಡು ಬಂದನ್ನು ಹನುಮ ಶಯ್ಯಾಗೃಹವ ತುಂಬಿಸಿದ ||

ಮುನ್ನಿನಂದದಿ ರಾಮಲಕ್ಷ್ಮಣ |
ರುನ್ನತದ ಮಣಿಮಂಚಮಧ್ಯದಿ |
ಜೆನ್ನ ಮಾಯಾಸತಿಯೊಡನೆಯೊಳಗಿರುವ ಸಮಯದಲಿ |
ಇನ್ನು ರಘುಪತಿ ಲಕ್ಷ್ಮಣರ ಬರ |
ವನ್ನಿರೀಕ್ಷಿಸಲೆಂದು ಬಂದನು |
ಸನ್ನುತದೆ ರವಿಯೆನಲು ಮೊಗದೋರಿದನು ಪೂರ್ವದಲಿ ||

ದೇವ ರಾಘವಲಕ್ಷ್ಮಣರು ಸಹ |
ದೇವರುಪ್ಪವಡವ ನಿರೀಕ್ಷಿಸು |
ತಾವಿಭೀಷಣ ರವಿಜ ನಳ ನೀಲಾಂಗದಾದಿಗಳು ||
ಪಾವಮಾನಿ ಸುಷೇಣ ಜಾಂಬವ |
ದೇವ ಮುಖ್ಯಸಮಸ್ತರಿರಲಂ |
ದೋವಿ ಮಾಯಾಮಹಿಮ ಮೆಯ್ಮುರಿದೆದ್ದು ಕಂದೆರೆದ ||

ಜಯ ಜಯ ಶ್ರೀಕಾಂತ ಜಯಜಯ |
ಲಯವಿಹೀನ ಮಹಾವಿನೋದನೆ |
ಜಯಜಯಚ್ಯುತ ಸಕಲಚೈತನ್ಯಾತ್ಮರೂಪಕನೆ ||
ಜಯತು ನಿರ್ಲೇಪಕ ನಿರಂಜನ |
ಜಯಜಯ ತ್ರೈಮೂರ್ತಿರೂಪಕ |
ಜಯಜಯವೆನುತ್ತಡಗೆಡೆದು ಕೈಮುಗಿದುದಖಿಳಜನ||೧೧೪||

ಆತತುಕ್ಷಣ ನಗುತ ಮಾಯಾ |
ತೀತನುಪ್ಪವಡಿಸುತ ಮೊಳೆನಗೆ |
ಪಾತಿನಲಿ ಸುಗ್ರೀವ ಜಾಂಬವ ಹನುಮರೊಡನೊಲಿದು ||
ಕೌತುಕವಿದೇನೆನಲು ಕನಸಲಿ |
ಪಾತಳದ ಮೈರಾವಣನು ತಾ |
ನೋತು ಕೊಂಡೈದಿದನು ಕಂಕಣದೇವಿಯಾಲಯಕೆ ||೧೧೫||

ಅಲ್ಲಿಗೈತಂದನಿಲನಂದನ |
ನೆಲ್ಲರನು ಸದೆಬಡಿದು ರಾಕ್ಷಸ |
ವಲ್ಲಭನ ಸಂಹರಿಸಿಯಾತನ ತಂಗೆಯಾತ್ಮಜಗೆ ||
ಘಸ್ಲಲಿತ ಪಟ್ಟವನು ಕಟ್ಟಿದ |
ನುಲ್ಲಸದೊಳತಿಮುದದೆ ಮೊದಲಿಂ |
ತಿಲ್ಲಿಗೆಮ್ಮನು ಕೊಂಡು ಬಹುದನು ಕಂಡೆವಾವೋದ||೧೧೬||

ಎನೆ ವಿಭೀಷಣದೇವ ಜಾಂಬವ |
ರಿನಿತು ನಿಶ್ಚಯವೀಗ ನಿಮ್ಮವ |
ನನಿಲಸಂಭವ ತಂದನೆಂದನಲಧಿಕಸಮ್ಮದದಿ ||
ತೊನೆದು ಮಕುಟವನಿದು ನಿದಾನವು |
ಹನುಮನಿಲ್ಲಿಂ ಮುಂದೆ ಕೇಳುವು |
ದಿನತನುಜ ನಮಗಹನು ಮುಖ್ಯಪ್ರಾಣನಿದು ನಿಜವು||೧೧೭||

ಕರೆದು ಸನ್ನಿಧಿಗಾಂಜನೇಯನ |
ನಿರತಿಶಯವಲ್ಲೆಮ್ಮ ಜೀವನ |
ಸರಿಯದಾರೈ ಬಾರೆನುತ ಬರಸೆಳೆದು ಬಿಗಿದಪ್ಪಿ ||
ತೊರವೆಯಧಿಪತಿ ಸತ್ಕರಿಸಿ ಬಳಿ |
ಕರಸ ಸುಗ್ರೀವಾದಿಸುಭಟರ |
ಹರಿಸಜಲದಲಿ ಮುಳುಗೆ ಮನ್ನಿಸಿದನು ಮಹೀರಮಣ||೧೧೮||

ಈಕತೆಯನತಿಭಕ್ತಿಯಲಿ ತಾ |
ನೇಕಮಾನಸನಾಗಿ ಕೇಳ್ದಡೆ |
ಸೋಕಿದತಿಪಾತಕವನೊಡೆದುಳಿದತುಳಕರುಣೆಯಲಿ ||
ಏಕಧರ್ಮಜ್ಞಾನನಯಮುಖ |
ಲೋಕವಂದಿತನೆನಿಸಿ ಜೀವರ |
ಸಾಕುವನು ನಯದಿಂದೆ ತೊರವೆಯರಾಯ ರಘುನಾಥ ||

ಅಂತು ಸಂಧಿ ನಾಲ್ಕಕ್ಕಂ ಪದ ೪೯೬ಕ್ಕಂ ಮಂಗಳಂ.

ಮೈರಾವಣನ ಕಾಳೆಗಂ ಸಮಾಪ್ತಂ

# ಶೋಧನಪತ್ರ

---

ಇಲ್ಲಿ ಸಂಖ್ಯೆಗಳು ಪದಸಂಖ್ಯೆಗಳನ್ನು ತಿಳಿಸುತ್ತವೆ.

**ಶೋಧಿತ ಭಾಗಗಳು—**

ಸಂಧಿ. ೨—೨೩. ರನ್ನಬೋದಿಗೆ | ೨೪ ಪುರವೆನುತ | ೨೬. ವೀಧಿಯ | ೩೮. ಕೋಳಿಯ | ೬೦. ಬೆಳೆದಿಹ | ೬೪. ನೆಯ ಪದ್ಯ-೬೩ ಎಂದಿರಬೇಕು ಈ ಸಂಧಿಯಲ್ಲಿ ಒಟ್ಟು ಪದಗಳು ೮೩. ಸಂಧ್ಯಂತದಲ್ಲಿ ೯೦ ಕ್ಕಂ ಎಂದಿರಬೇಕು.

ಸಂಧಿ. ೩—೧೨. ಅಕಟೆಂದ | ೩೬ ಕೆಯ್ಮುಗಿದು ೨೨. ಹರಬ್ರಹ್ಮಾದಿ | ೨೯. ಮುಸುಗಳೋ .... ಸುರನರೋರಗರಳವೆ | ೩೪. ಅಗಣಿತದ .... ಮಣಿಮಯದ | ೪೦. ಜಟ್ಟಿಗಳ | ೫೭. ಆದಿಪುರುಷನನುಯ್ದು |

ಸಂಧಿ. ೪— ೩೫. ಖಡುಗದ | ೪೮. ಹನುಮನ | ೬೪. ಹನುಮಂತ | ೬೫. ಮಾರುತಿ | ೯೮. ರಾಮಮೂರ್ತಿಯ.

